that something more is given to them, and also for the injured people. About the condition of the injured persons, how they are progressing and other aspects will be looked into, and the informatoin will be furnished tomorrow.

ಶ್ರೀ ಸಿ. ಎಂ. ಇಬ್ರಾಹಿಂ.—ನಾನು ಕೇಳಿದಂಥ ಪ್ರಶ್ನೆಗೂ ತಾವು ನಾಳೆ ಉತ್ತರ ಹೇಳುತ್ತೀರಾ ?

ಶ್ರೀ ಆರ್. ಗುಂಡೂರಾವ್.—ಅಕ್ಸಿಡೆಂಟ್ ಆದಂಥ ಬಸ್ ಎಷ್ಟು ಕಿಲೋಮೀಟರ್ ಓಡಿದೆ ಎನ್ನುವುದನ್ನು ನೋಡಿ ನಾನು ಹೇಳಬೇಕಾಗಿದೆ.

ಶ್ರೀ ಪಂಪಾಪತಿ.—ಅಧ್ಯಕ್ಷರೇ, ಮಾನ್ಯ ಸದಸ್ಯರಾದ ಇಬ್ರಾಹಿಂ ಅವರು ಹೇಳಿದ ಹಾಗೆ ಬಸ್ ಸರಿಯಾಗಿರಲಿಲ್ಲ. ಎರಡು ತಿಂಗಳ ಹಿಂದೆ ಬಸ್ ಡ್ರೈವರ್ಸ್ ನಾವು ಕಂಡಿಷನ್ ಇಲ್ಲದ ಬಸ್‌ನ್ನು ತೆಗೆದುಕೊಂಡು ಹೋಗುವುದಿಲ್ಲ ಎಂದು ಮುಷ್ಕರ ಹೂಡಿದ್ದಕ್ಕೆ ಅವರ ಮೇಲೆ ಕ್ರಮ ತೆಗೆದುಕೊಂಡು ಕೆಲಸದಿಂದ ತೆಗೆದುಹಾಕಿದ್ದಾರೆ. ನಾನು ಮೊನ್ನೆ ಬೆಳಗಾಂ ಲಕ್ಸುರಿ ಬಸ್ಸಿಗೆ ಬಂದಾಗ ಅದಕ್ಕೆ ಯಾವುದೋ ಕಾರಣದಿಂದ ಇಂಜಿನ್‌ಗೆ ಬೆಂಕಿ ತಗುಲಿ ತೊಂದರೆಯಾಯಿತು. ಬಸ್‌ಗಳ ಕಂಡಿಷನ್ಸ್ ಸರಿಯಾಗಿಲ್ಲದಿದ್ದರೆ ಆಕ್ಸಿಡೆಂಟ್ಸ್ ಆಗುತ್ತವೆ. ಆದ್ದರಿಂದ ಇಂಥ ಬಸ್ಸುಗಳನ್ನು ರೋಡಿನಲ್ಲಿ ಓಡಿಸದೆ ನಿಲ್ಲಿಸಬೇಕು. ಡ್ರೈವರ್ಸ್ ಮೇಲೆ ಏನು ಕ್ರಮ ತೆಗೆದುಕೊಂಡಿದ್ದಾರೆ ಅದನ್ನು ರದ್ದು ಮಾಡಬೇಕು ಮತ್ತು ಅವರನ್ನು ಇನ್ನು ಮುಂದಾದರೂ ಕೆಲಸಕ್ಕೆ ತೆಗೆದುಕೊಳ್ಳಬೇಕು ಎಂದು ನಾನು ಮನವಿ ಮಾಡಿಕೊಳ್ಳುತ್ತೇನೆ.

Budget Estimates for 1978–79
Demands for Grants

Demand Nos : 21 and 58

†ಶ್ರೀ ಜಿ. ಕೆ. ಸುಬ್ಬಯ್ಯ (ವಿರಾಜಪೇಟೆ).—ಮಾನ್ಯ ಅಧ್ಯಕ್ಷರೇ, ನಾನು ಪ್ರಥಮವಾಗಿ ಬಸ್. ಅಘಾತದಲ್ಲಿ ತೊಂದರೆಗೆ ಈಡಾದ ಸ್ನೇಹಿತರುಗಳು ಬೇಗನೆ ಗುಣ ಮುಖರಾಗಿ ಬರಲಿ ಎಂದು ದೇವರಲ್ಲಿ ಪ್ರಾರ್ಥಿಕೊಂಡು, ಮಾನ್ಯ ಎಕ್ಸೈಸ್ ಮಂತ್ರಿಗಳು ಮಂಡಿಸಿರತಕ್ಕ ಬೇಡಿಕೆಗಳ ಬಗ್ಗೆ ಎರಡು ಮಾತುಗಳನ್ನು ಹೇಳಬಯಸುತ್ತೇನೆ. ಕೊಡಗು ಜಿಲ್ಲೆ ಕರ್ನಾಟಕದ ಜೊತೆಯಲ್ಲಿ ವಿಲೀನವಾಗದಿದ್ದರೆ ನನ್ನ ಅಭಿಪ್ರಾಯದಲ್ಲಿ ಕರ್ನಾಟಕ ರಾಜ್ಯದಲ್ಲಿ ಇದಕ್ಕೆ ಒಬ್ಬ ಎಕ್ಸೈಸ್ ಮಂತ್ರಿ ಕ್ಯಾಬಿನೆಟ್ ದರ್ಜೆಯವರು ಇರುತ್ತಾ ಇರಲಿಲ್ಲ. ಜನಸಂಖ್ಯೆಯ ಗಾತ್ರದಲ್ಲಿ ಕೊಡಗು ಜಿಲ್ಲೆ ಬಹಳ ಸಣ್ಣದಾಗಿದೆ ಆದರೆ ಆದರಿಂದ ಬರತಕ್ಕ ಮೊತ್ತವನ್ನು ನಾವು ನೋಡಿದರೆ, ಬಹುಭಾಗವನ್ನು ಎಕ್ಸೈಸ್ ಇಲಾಖೆಗೆ ನಮ್ಮ ಜನರು ಕೊಡುತ್ತಿದ್ದಾರೆ. ಉದಾಹರಣೆಗೆ ಹೇಳುವುದಾದರೆ, ನಮ್ಮ ವಿರಾಜಪೇಟೆಯ ತಾಲೂಕಿನಲ್ಲಿ ಒಟ್ಟು ೩೪ ಲಿಕ್ಕರ್ಸ್ ಷಾಪ್‌ಗಳು ಇವೆ. ೧೯೭೫–೭೬ನೇ ಇಸವಿಯಲ್ಲಿ ಷಾರಬ್ ಹರಾಜಿನಿಂದ ಒಂದು ತಿಂಗಳಿಗೆ ಸುಮಾರು ೧ ಲಕ್ಷ ರೂಪಾಯಿಗಳು ಬರುತ್ತಿತ್ತು. ಅದು ೧೯೭೬–೭೮ರಲ್ಲಿ ಒಂದು ತಿಂಗಳಿಗೆ ಒಂದು ಲಕ್ಷ ೩೦ ಸಾವಿರ ರೂಪಾಯಿಗಳಿಗೆ ಏರಿತು. ೧೯೭೮-೭೯ರಲ್ಲಿ ೧,೩೦,೯೦೦ ರೂಪಾಯಿಗಳಿಗೆ ವರಿತು. ಮಾನ್ಯ ಸ್ನೇಹಿತರಾದ ಫರ್ನಾಂಡೀಸ್ ಅವರು ಮಾತನಾಡುತ್ತಾ ಎಮರ್ಜನ್ಸಿಯ ಕಾಲದಲ್ಲಿ ಹೆಚ್ಚುತ್ತಿದರೆಂದು ಶರಾಪು ಕುಡಿಯುವವರು ಎಂದು ಹೇಳಿದರು, ಆದರೆ ನನ್ನ ತಾಲ್ಲೂಕಿನಲ್ಲಿ ತೆಗೆದುಕೊಂಡರೆ ಎಮರ್ಜನ್ಸಿಯಲ್ಲಿ ಸ್ವಲ್ಪ ರೆಸ್ಟ್ರಿಕ್ಷನ್ ಇದ್ದುದರಿಂದ ಎಲ್ಲರೂ ಸರ್ಕಾರಕ್ಕೆ ಸ್ವಲ್ಪ ಹೆದುರುತ್ತಿದ್ದರು. ನಂತರ ಎಮರ್ಜನ್ಸಿಯನ್ನು ತೆಗೆದ ಮೇಲೆ ಫುಲ್ ಡೆಮಾಕ್ರಸಿ ಬಂದು ಶರಾಬು ಜಾಸ್ತಿಯಾಯಿತು. ಈಗ ಕಂಟ್ರಾಕ್ಟದಾರರು ಹೆಚ್ಚಾಗಿ ಹಣವನ್ನು ಸಿಬ್ಬಂದಿಯವರಿಗೆ ಕೊಟ್ಟ ಪರಿಣಾಮವಾಗಿ ಫ್ರೀಆಗಿ ಕುಡಿಯಲಿಕ್ಕೆ ಜನತೆಯೂ ಶುರು ಮಾಡಿದ್ದಾರೆ.

ಈ ಇಲಾಖೆಯು ದೊಡ್ಡದಾಗಿ ಬೆಳೆಯುತ್ತಾ ಬಂದಿದೆ, ಇದರಲ್ಲಿರತಕ್ಕ ಸಿಬ್ಬಂದಿ ಸಾಕಾಗುವುದಿಲ್ಲ ಎಂದು ನನ್ನ ಅಭಿಪ್ರಾಯ. ಇಲಿಸಿಟ್ ಡಿಸ್ಟಿಲೇಷನ್‌ನ್ನು ತಡೆಹಿಡಿಯಲಿಕ್ಕೆ ಸಾಕಷ್ಟು ಸಿಬ್ಬಂದಿ ಇಲ್ಲ. ಸಿಬ್ಬಂದಿ ಇಲ್ಲದೆ ಇದ್ದುದರಿಂದ ಇಲಿಸಿಟ್ ಡಿಸ್ಟಿಲೇಷನ್ ಮಾಡುವವರ ಸಂಖ್ಯೆಯೂ ಜಾಸ್ತಿಯಾಗುತ್ತಿದೆ. ಎಕ್ಸೈಸ್ ಸ್ಟಾಫ್‌ನವರು ಸರಿಯಾಗಿ ಕೆಲಸ ಮಾಡುತ್ತಿಲ್ಲ ಏಕೆಂದರೆ ಚೆಕ್ ಮಾಡಿದರೆ ಶರಾಬು ಕುಡಿಯುವರಿಗೆ ತೊಂದರೆಯಾಗಿ ಶರಾಬು ಖರ್ಚಾಗುವುದಿಲ್ಲ. ಆದ್ದರಿಂದ ಸ್ಟಾಫ್‌ನವರು ಯಾರಾದರೂ ಪುಕಾರು

ಹೇಳಿದರೆ ಮಾತ್ರ ಹೋಗಿ ಚೆಕ್ ಮಾಡುತ್ತಾರೆ. ಕೆಲವು ಸಂದರ್ಭದಲ್ಲಿ ಇಲಿಸಿಟ್ ಡಿಸ್ಟಿಲೇಷನ್ ಮಾಡದೆ ಇದ್ದವರನ್ನು ಹಿಡಿದುಕೊಂಡು ಹೋಗಿ ಹೊಡೆದಿದ್ದಾರೆ. ಈ ತರಹದ ಅಕ್ರಮಗಳು ನಡೆಯದ ಹಾಗೆ ಎಕ್ಸೈಸ್ ಸ್ಟಾಫ್‌ನವರು ನೋಡಿಕೊಳ್ಳಬೇಕು ಎಂದು ನನ್ನ ಅಭಿಪ್ರಾಯ, ನಂತರ ಸಿಬ್ಬಂದಿಯ ವಿಚಾರವಾಗಿ ನಾನು ಹೇಳುವಾಗ ಮಾನ್ಯ ಮಂತ್ರಿಗಳು ಇಲ್ಲಿ ಕೆಲವು ವಿಷಯಗಳನ್ನು ಗಮನಿಸಬೇಕಾಗುತ್ತದೆ. ಈ ಇಲಾಖೆಗೆ ಹೆಚ್ಚಿಗೆ ಓದಿದರೂ ಸಹ ಸಣ್ಣಹುದ್ದೆಗೆ ಬರುತ್ತಾರೆ. ಇದರ ಹಿನ್ನಲೆ ಏನು ಎಂಬುದಾಗಿ ತಾವು ಆಲೋಚನೆ ಮಾಡಬೇಕಾಗುತ್ತದೆ.

[ಚೇರ್ಮನ್ (ಶ್ರೀ ಎಚ್. ಟಿ. ಕೃಷ್ಣಪ್ಪನವರು) ಪೀಠವನ್ನು ಅಲಂಕರಿಸಿದರು]

ಶರಾಬು ಅಂಗಡಿಗಳು ದಿನೇ ದಿನೇ ಜಾಸ್ತಿಯಾಗುತ್ತಿವೆ. ಇದನ್ನು ಸರ್ಕಾರದವರು ತಡೆಹಿಡಿಯುವುದು ಉತ್ತಮ ಎಂದು ನನ್ನ ಅಭಿಪ್ರಾಯ. ಕೆಲವು ದಿಕ್ಕಿನಲ್ಲಿ ಆಕ್ಷನ್‌ನಲ್ಲಿ ಮಾರಾಟ ಮಾಡಿದ ಷಾಪ್ಸ್‌ಗಳು ಬೇರೆ ಇದ್ದು, ಕೆಲವಾರು ಕಡೆಗಳಲ್ಲಿ ಯಾವ ಪರ್ಮಿಷನ್ ಇಲ್ಲದೆ ಸಬ್ ಸೆಂಟರ್‌ಗಳನ್ನು ನಡೆಸುತ್ತಿದ್ದಾರೆ ಇದು ಅಕ್ರಮ ಇಲಿಸಿಟ್‌ಗೆ ಮಿಶ್ರ ಮಾಡಿ ಪಾಪದ ಜನರಿಗೆ ಕುಡಿಸುತ್ತಾರೆ. ಇದರಿಂದ ಇವರ ದೇಹಸ್ಥಿತಿ ಹಾಳಾಗಿ ಹೋಗುತ್ತದೆ ೧೯೭೬–೭೭ನೇ ಇಸವಿಯಲ್ಲಿ ಶರಾಬು ಆಕ್ಷನ್ ಮಾಡಿದಂಥ ಕಾಲದಲ್ಲಿ ೧–೮೦ ಪೈಸೆಗೆ ಒಂದು ಮಿಲಿ ಲೀಟರ್ ಇತ್ತು ಇದರ ವ್ಯಾಪಾರ ೧,೩೦,೯೦೦ ರೂಪಾಯಿಗಳಿಗೆ ಏರಿದಾಗ ಇದೇ ಮಿಲಿ ಲೀಟರ್ ಬೆಲೆ ಎರಡು ರೂಪಾಯಿಗಳಿಗೆ ಏರಿತು. ಇದನ್ನು ಉಪಯೋಗಿಸಿದ ಜನರು ಹೇಳುತ್ತಾರೆ ಇದರ ಕ್ವಾಲಿಟಿಯೂ ಸಹ ಚೆನ್ನಾಗಿಲ್ಲ ಎಂದು. ಮಾನ್ಯ ಮಂತ್ರಿಗಳು ಇದರ ಕ್ವಾಲಿಟಿಯ ಬಗ್ಗೆ ಚೆಕ್ಕಾಗಿ ವಿಚಾರ ಮಾಡಬೇಕು ಎಂದು ನಾನು ಈ ಸಮಯದಲ್ಲಿ ಹೇಳುತ್ತೇನೆ. ಸರ್ಕಾರಕ್ಕೆ ಕಂಟ್ರಾಕ್ಟ್‌ದಾರರು ಹಣ ಕೊಡುತ್ತಾರೆ. ಒಂದು ಬಾಟಲ್ ಶರಾಬುಗೆ ಹಿಂದೆ ಆರು ರೂಪಾಯಿಗಳು ಇತ್ತು. ಆದರೆ ಇದು ಈಗ ೧೨ ರೂಪಾಯಿಗಳಂತೆ ಮಾರಾಟವಾಗುತ್ತಿದೆ. ಇದರಿಂದ ಜನತೆಗೆ ಪಂಚನೆಯಾಗಿದೆ. ಆದರೂ ಕೂಡ ಇದರ ಕ್ವಾಲಿಟಿ ಚೆನ್ನಾಗಿಲ್ಲ ಸರಿಯಾಗಿಲ್ಲ ಎನ್ನುವ ಪುಕಾರುಗಳು ಬರುತ್ತಿವೆ. ಇದನ್ನು ತಾವು ನೋಡಬೇಕು.

ಇನ್ನು ಲೇಬರ್ ಇಲಾಖೆಯ ಬಗ್ಗೆ ಹೇಳುವುದಾದರೆ ಈ ಇಲಾಖೆ ಬಹಳ ದೊಡ್ಡ ಇಲಾಖೆ. ಈ ಲೇಬರ್‌ಕಮೀಷನರಿಗೆ ಬಹಳ ಕೆಲಸ ಇರುತ್ತದೆ. ಅವರು ೧೨ ಕಮಿಟಿಗಳಿಗೆ ಅಧ್ಯಕ್ಷರಾಗಿದ್ದಾರೆ. ಹೀಗಾಗಿ ಯಾವುದೊಂದು ತೋಟಕ್ಕೂ ಕೂಡ ಅವರನ್ನು ಬರಮಾಡಿಕೊಳ್ಳುವುದು ಕಷ್ಟವಾಗಿದೆ. ಉದಾಹರಣೆಗೆ ಹೇಳುವುದಾದರೆ ನಾನು ವಾಸಿಸತಕ್ಕ ಕಡೆಯಲ್ಲಿ ಗಲಾಟೆ ತುಂಬ ಇದ್ದರೂ ಸಹ ಲೇಬರ್ ಕಮೀಷನರಿಗೆ ಅಲ್ಲಿಗೆ ಬೇಟಿ ನೀಡುವುದಕ್ಕೆ ಅವಕಾಶವಾಗಿಲ್ಲ. ಅದಕ್ಕೆ ಹೆಚ್ಚಾಗಿ ಅವರಿಗೆ ಕೆಲಸ ಇರುವುದೆ ಕಾರಣವಾಗಿದೆ ಇದನ್ನು ಯಾವುದಾದರೂ ರೀತಿ ಸಿಬ್ಬಂದಿಗಳನ್ನು ಹೆಚ್ಚು ಮಾಡಿಯಾಗಲೀ ಅಥವಾ ಇತರ ಉದ್ಯೋಗಸ್ಥರಿಗೆ ಕಮಿಟಿಗಳನ್ನು ಪಂಚಿಕೊಟ್ಟಾಗಲೀ ಇವರ ಹೆಚ್ಚಿನ ಕೆಲಸವನ್ನು ಕಡಿಮೆ ಮಾಡಬಹುದೆಂದು ನನ್ನ ಅಭಿಪ್ರಾಯ ಹೀಗೆ ಮಾಡುವುದರಿಂದ ಒಂದು ಗೊತ್ತಾದ ನೀತಿ ನಿಯಮಗಳಿಲ್ಲದೆ ನಿರ್ಣಯ ಕೈಗೊಳ್ಳುತ್ತಿರತಕ್ಕಂತಹ ಅಧಿಕಾರಿಗಳ ಕೆಲಸಗಳನ್ನು ಇವರು ನೋಡುವುದಕ್ಕೆ ಅನುಕೂಲವಾಗುತ್ತದೆ. ಕೆಲವು ಕಾಲದಲ್ಲಿ ಮಜದೂರಿಗಳನ್ನು ತೆಗೆದು ಹಾಕಲಿಕ್ಕೆ ಈ ಅಧಿಕಾರಿಗಳು ತೋಟದ ಮಾಲೀಕರಿಗೆ ಸಹಾಯ ಮಾಡುತ್ತಾರೆ. ಜೊತೆಗೆ ೩ ನೋಟುಗಳನ್ನು ಕೊಟ್ಟರೆ ಸಾಕು ಅವರನ್ನು ಹೊರಗಡೆ ಕಳುಹಿಸಬಹುದೆಂದು ಹೇಳುತ್ತಾರೆ. ಅವರ ಬಗ್ಗೆ ಎಚ್ಚರಿಕೆಯಿಂದ ಇರಬೇಕು. ಉದಾಹರಣೆಗೆ ೧೯೭೬ರಲ್ಲಿ ನಮ್ಮ ಕಾಟ್ಟದ ಹತ್ತಿರ ಇರತಕ್ಕ ತೋಟಕ್ಕೆ ಒಬ್ಬ ಇನ್ಸ್‌ಪೆಕ್ಟರ್ ಹೋಗಿ ಯಾರಿಗೆ ಸಹಾಯ ಮಾಡಬೇಕೋ ಅವರಿಗೆ ಸಹಾಯ ಮಾಡದೆ ತೋಟದ ಮಾಲೀಕರು ಕೊಟ್ಟಂತಹ ಬೀಟೆ ಮರದ ಆನೆ ಮರಿಗಳನ್ನು ಹಿಡಿದು ಕೊಂಡು ಬಂದರು. ಈ ರೀತಿ ಮಾಡಿರತಕ್ಕ ಅಧಿಕಾರಿಗಳ ಮೇಲೆ ಎಷ್ಟು ದೂರು ಕೊಟ್ಟರೂ ಸಹ ಸರಿಯಾದ ಕ್ರಮ ತೆಗೆದುಕೊಳ್ಳುತ್ತಿಲ್ಲ, ತಮ್ಮ ಕಾಲದಲ್ಲಾದರೂ ಸಹ ಎಚ್ಚರಿಕೆ ವಹಿಸಬೇಕೆಂದು ಹೇಳುತ್ತೇನೆ. ಈ ವರದಿಯ ಪ್ರಕಾರ ಅನೇಕ ಆಕ್ಟ್‌ಗಳು ಇವೆ ಎಂದು ತಿಳಿದು ಬರುತ್ತದೆ. ಆದರೆ ಈ ಆಕ್ಟ್‌ಗಳು ಸರಿಯಾದ ರೀತಿಯಲ್ಲಿ ಜಾರಿಗೆ ಬರುತ್ತಿಲ್ಲ ಅದು ವಿಷಾದನೀಯವಾದ ಸಂಗತಿ. ಪ್ಲಾಂಟೇಷನ್ ಲೇಬರ್ ಆಕ್ಟ್‌ನಲ್ಲಿ ಅವರಿಗೆ ಸಿಕ್ಕಬೇಕಾದ ಅನೇಕ ಸವಲತ್ತುಗಳು ದೊರೆಯುತ್ತಿಲ್ಲ. ಆದರೆ ಕ್ರಮವೇ ಸರಿಯಿಲ್ಲ. ವಾರಕ್ಕೆ ಒಂದು ದಿನ ರಜ ಇರುತ್ತದೆ ಅವತ್ತಿನ ದಿವಸ ತಪರಿಗೆ ಏನು ಒಂದು ರೆಕ್ರಿಯೇಷನ್ ಮಾಡಬೇಕೋ ಅದು ಇಲ್ಲ ಲೇಬರ್ ಎಜುಕೇಷನ್ ಇಲ್ಲ. ಇದನ್ನೆಲ್ಲಾ ಪ್ರತಿ ತೋಟದಲ್ಲಿಯೂ ಮಾಡಬೇಕೆಂದು ಒಂದು ಕಾನೂನನ್ನು ಮಾಡಿ ಅದನ್ನು ಕಡ್ಡಾಯವಾಗಿ ಜಾರಿಗೆ ತರಬೇಕು. ಮೆಟರ್ನಿಟಿ

ಬಿನಿಫಿಟ್ ಆಕ್ಟ್ ಏನೋ ಇದೆ ಆದರೆ ಅದೂ ಕೂಡ ಜಾರಿಯಲ್ಲಿ ಇಲ್ಲ. ಇದು ತುಂಬ ವಿಷಾದನೀಯ. ಕೆಲವು ತೋಟದ ಮಾಲೀಕರ ಮೇಲೆ ಬೇಕಾದಷ್ಟು ಪುಕಾರು ಮಾಡಿದರೂ ಕೂಡ ಅಧಿಕಾರಿಗಳು ಅವರ ಮೇಲೆ ಕ್ರಮ ಜರುಗಿಸದೆ ಕೂಲಿಗಾರರಿಗೆ ಬಹಳ ತೊಂದರೆಯಾಗುತ್ತಿದೆ ಇದು ಸರಿಯಲ್ಲ ಮಿನಿಮಮ್ ವೇಜಸ್ ಆಕ್ಟ್ ೧೯೭೬ ಇದು ಎಲ್ಲಿದೆ ಎಂದು ಗೊತ್ತಿಲ್ಲ. ಎಲ್ಲೆಲ್ಲಿ ಯಾವ ಯಾವ ಕೆಲಸಕ್ಕೆ ಎಷ್ಟೆಷ್ಟು ಕೂಲಿ ಕೊಡಬೇಕೆಂದು ಗೊತ್ತಾಗದಿದ್ದರೆ ಅಧಿಕಾರಿಗಳು ಅದನ್ನೆಲ್ಲ ಪರಿಶೀಲನೆ ಮಾಡುವುದಕ್ಕೆ ಕಷ್ಟವಾಗುತ್ತದೆ ಪ್ಲಾಂಟರ್ಸ್ ಕೂಡ ಸರಿಯಾಗಿ ಕೊಡುವುದಿಲ್ಲ. ಆದ್ದರಿಂದ ಆ ಆಕ್ಟ್‌ನ್ನು ಕೂಡಲೇ ಜಾರಿಗೆ ತರಬೇಕೆಂದು ಹೇಳುತ್ತೇನೆ, ಪರ್ಷಾಂತ್ಯದಲ್ಲಿ ನಮ್ಮ ಕಡೆ ಮಜದೂರರಿಗೆ ಪ್ರಾವಿಡೆಂಟ್ ಫಂಡ್ ಬೋನಸ್, ಗ್ರಾಚ್ಯುಟಿ ಎಂದು ಬೇಕಾದಷ್ಟು ಹಣ ಕೊಡುತ್ತಾರೆ ಆದರೆ ಇದು ಬಹಳ ಅಕ್ರಮವಾಗಿ ಹಾಳಾಗುತ್ತಿದೆ. ಆದ್ದರಿಂದ ಅವರಿಗೆ ಒಂದು ಕಂಪಲ್ಸರಿ ಡಿಪಾಸಿಟ್ ಸ್ಕೀಂ ಎಂದು ಮಾಡಿದರೆ ಎಷ್ಟೋ ಹಣ ಉಳಿಯುತ್ತದೆ ವಯಸ್ಸಾದ ಕಾಲದಲ್ಲಿ ಅದನ್ನು ಉಪಯೋಗಿಸಿಕೊಂಡು ಚೆನ್ನಾಗಿ ಜೀವನ ಮಾಡಲಿಕ್ಕೆ ಅನುಕೂಲವಾಗುತ್ತದೆ. ಆದ್ದರಿಂದ ಅವರಿಗೆ ಒಂದು ಕಡ್ಡಾಯ ಡಿಪಾಸಿಟ್ ಸ್ಕೀಂ ಅನ್ನು ಮಾಡಬೇಕೆಂದು ಹೇಳುತ್ತೇನೆ ಈ ಬಗ್ಗೆ ಸರ್ಕಾರದ ಒಂದು ಪಿಡಿತವಿದ್ದರೆ ಮಾತ್ರ ಸಾಧ್ಯ ಇಲ್ಲದಿದ್ದರೆ ವಾಲಂಟರಿಯಾಗಿ ಅವರನ್ನು ಹಣ ಕೇಳಿದರೆ ದೊರೆಯುವುದಿಲ್ಲ. ಆದಕಾರಣ ಅವರಿಗೆ ಒಂದು ಕಂಪಲ್ಸರಿ ಯೋಜನೆಯನ್ನು ಮಾಡಿ ಅವರ ಅಭಿವೃದ್ಧಿಗೆ ಸಹಾಯ ಮಾಡಬೇಕೆಂದು ಕೇಳಿ ಕೊಳ್ಳುತ್ತಾ ಇಷ್ಟು ಕಾಲ ಮಾತನಾಡಲಿಕ್ಕೆ ಅವಕಾಶ ಕೊಟ್ಟ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಎಸ್. ಎಸ್. ರಕೇರಿ (ಬಳ್ಳಿಗಿ).—ಮಾನ್ಯ ಅಧ್ಯಕ್ಷರೇ, ಈಗಾಗಲೇ ಲೇಬರ್, ಎಕ್ಸೈಜ್ ಮತ್ತು ಎಂಪ್ಲಾಯ್‌ಮೆಂಟ್ ಬಗ್ಗೆ ನನ್ನ ಮಿತ್ರರನೇಕರು ಮಾತನಾಡಿದ್ದಾರೆ. ಮಾನ್ಯ ಮಿತ್ರರಾದ ಮೈಬೇಲ್ ಫರ್ನಾಂಡೀಸ್‌ರವರು ಬಹಳ ಸುಂದರವಾದ ವಿಚಾರಗಳನ್ನು ಈ ಸದನದ ಮುಂದಿಟ್ಟಿದ್ದಾರೆ. ಇದೇ ಬೇಡಿಕೆಗಳ ಸಲುವಾಗಿ ನಮ್ಮ ಪಕ್ಷದ ಮಾಜಿ ನಾಯಕರಾದ ದೇವೇಗೌಡರು ತಮ್ಮ ಕೆಲವು ವಿಚಾರಗಳನ್ನು ಇಟ್ಟಿದ್ದಾರೆ. ನಾನು ಇದರ ಬಗ್ಗೆ ಒಂದೆರಡು ಸಲಹೆಗಳನ್ನಷ್ಟೇ ಮಾಡುತ್ತೇನೆ. ಮುಖ್ಯವಾಗಿ, ಇವತ್ತಿನ ದಿವಸ ನಿರುದ್ಯೋಗ ಸಮಸ್ಯೆ ಎಂಬುದು ಬಹಳ ಬೃಹತ್ ಸಮಸ್ಯೆಯಾಗಿ ನಮ್ಮ ರಾಷ್ಟ್ರದ ಮುಂದೆ ಮತ್ತು ನಮ್ಮ ರಾಜ್ಯದ ಮುಂದೆಯೂ ಇದೆ. ಕಳೆದ ೩೦ ವರ್ಷಗಳಿಂದ ನಿರುದ್ಯೋಗ ಸಮಸ್ಯೆಯನ್ನು ನಿವಾರಿಸುವ ಸಲುವಾಗಿ ಸತತ ಪ್ರಯತ್ನವನ್ನು ಈ ದೇಶದಲ್ಲಿ ಮಾಡಿದ್ದೇವೆ. ಅದೇ ಪ್ರಕಾರ ಕರ್ನಾಟಕ ರಾಜ್ಯ ಸರ್ಕಾರವು ಕೂಡ ಮಾಡಿದೆ. ಆದರೆ ನಮಗೆ ಇವತ್ತು ಒಂದು ಸ್ಪಷ್ಟವಾದ ಚಿತ್ರ ಏನು ಕಾಣುತ್ತದೆ ಎಂದರೆ ಎಲ್ಲಿ ಹೋದರೂ ಎಸ್. ಎಸ್. ಎಲ್. ಸಿ. ಆದವರು, ಪದವೀಧರರು, ವೈದ್ಯರು, ಎಂಜನಿಯರ್‌ಗಳು ಇಂಥವರನೇಕರು ನಿರುದ್ಯೋಗಿಗಳಾಗಿ ಕೆಲಸದ ಸಲುವಾಗಿ ಹಳ್ಳಿಗಳನ್ನು ಬಿಟ್ಟು ಪಟ್ಟಣಗಳಲ್ಲಿ ಅಲೆದಾಡುತ್ತಿದ್ದಾರೆ. ಇಂಥ ಒಂದು ಧಾರುಣ ಚಿತ್ರ ನಮ್ಮ ಕಣ್ಮುಂದೆ ಇದೆ. ಈಗ ಇಲಾಖೆಯ ಅಂಕಿಸಂಖ್ಯೆಗಳನ್ನು ನೋಡಿದರೆ, ಎಂಪ್ಲಾಯ್‌ಮೆಂಟ್ ಎಕ್ಸ್‌ಛೇಂಜ್ ಹಾಗೂ ಸ್ಪೆಷಲ್ ಎಂಪ್ಲಾಯ್‌ಮೆಂಟ್ ಎಕ್ಸ್‌ಛೇಂಜ್‌ಗಳಲ್ಲಿ ಎಷ್ಟೋ ಜನ ಸರ್ಕಾರೀ ನೌಕರಿಯ ಸಲುವಾಗಿ ೫–೬ ವರ್ಷಗಳಿಂದ ತಮ್ಮ ಹೆಸರುಗಳನ್ನು ನೊಂದಾಯಿಸಿಕೊಂಡು ಕಾಯುತ್ತಿರುವ ಚಿತ್ರ ಸ್ಪಷ್ಟವಾಗಿ ಕಂಡುಬರುತ್ತಿದೆ. ಆ ಕಾಯುವಂತಹ ನೋವು ಹೇಗಿರುತ್ತದೆಂಬುದನ್ನು ಮಾನ್ಯ ಮಂತ್ರಿಗಳ ಗಮನಕ್ಕೆ ತರುವುದಕ್ಕೆ ಇಚ್ಛಿಸುವುದಿಲ್ಲ. ಪ್ರಿಯತಮನಿಗೆ ಪ್ರಿಯತಮೆಯ ಬರವಿಗಾಗಿ ಹಾಗೂ ಪ್ರಿಯತಮೆಗೆ ಪ್ರಿಯತಮನ ಆಗಮನಕ್ಕಾಗಿ ಕಾಯುವ ಬಗ್ಗೆ ಹೇಗೆ ಪ್ರೀತಿ ಕಾತರಗಳಿರುತ್ತವೆಯೋ ಆ ರೀತಿ ಅಲ್ಲಿ ನೌಕರಿಗಾಗಿ ಕಾಯುವವರ ನೋವಾ ಕಣ್ಣೀರಿನ ಕಣೆಯಾಗಿದೆ ಮತ್ತು ಬಡತನದ ಭವಣೆಯಿಂದ ಹೇಳತೀರದ ಗೋಳಿನ ಗೋಳಾಟವಾಗಿದೆ. ಉದ್ಯೋಗವಿಲ್ಲದವರು ನೌಕರಿಗೆ ಕಾದು ಕಾದು ಅವರಿಗೆ ನೌಕರಿ ಸಿಗದಿದ್ದರೆ ಅವರಿಗೆ ಎಷ್ಟು ನೋವು ಮತ್ತು ತಳಮಳ ಉಂಟಾಗುತ್ತದೆ ಎಂಬುದನ್ನು ಗಮನಿಸಬೇಕು, ತಂದೆತಾಯಿಗಳು ಕಣ್ಣೀರು ಸುರಿಸುತ್ತಿದ್ದಾರೆ. ಇಂಥ ಒಂದು ಸ್ಪಷ್ಟವಾದ ಚಿತ್ರ ನಮಗೆ ಕಂಡು ಬರುತ್ತಿದೆ. ಹಳ್ಳಿಗಳಲ್ಲಿರತಕ್ಕ ತಂದೆತಾಯಿಗಳು ತಮ್ಮ ಮಕ್ಕಳಿಗೋಸ್ಕರ ಸಾಲ ಮಾಡಿ ಓದಿಸಿರುತ್ತಾರೆ. ಇವರಿಗೆ ನೌಕರಿ ಸಿಗದೇಹೋದರೆ ಅವರಪರಿಸ್ಥಿತಿ ಏನಾಗುತ್ತದೆ ಎಂಬುದನ್ನು ಯೋಚನೆ ಮಾಡಬೇಕು. ನೌಕರಿಗೆ ಕೂಡ ಸಾವಿರಾರು ರೂಪಾಯಿ ಖರ್ಚು ಮಾಡಿ ಮಕ್ಕಳು ಅಲೆದಾಡಬೇಕಾಗುತ್ತಿದೆ. ನಿರುದ್ಯೋಗ ಸಮಸ್ಯೆ ತಾಂಡವವಾಡುತ್ತಿದೆ. ನಾನು ಈ ಮನೆಯ ಗಮನಕ್ಕೆ ಕೆಲವು ಅಂಶಗಳನ್ನು ತರುತ್ತಿದ್ದೇನೆ, ಸುಮಾರು ೪,೯೭,೮೮೪ ಜನ ನಿರುದ್ಯೋಗಿಗಳು ಕರ್ನಾಟಕದಲ್ಲಿರುವಂಥ ಉದ್ಯೋಗ ವಿನಿಮಯ ಕಛೇರಿಯಲ್ಲಿ ಉದ್ಯೋಗಕ್ಕಾಗಿ ತಮ್ಮ ಹೆಸರುಗಳನ್ನು ನೊಂದಾಯಿಸಿದ್ದಾರೆ. ಇದರಲ್ಲಿ

ಎಸ್. ಎಸ್. ಎಲ್. ಸಿ. ಆಗದೇ ಇರುವವರು ೧,೮೩,೧೬೬ ಜನ, ಎಸ್. ಎಸ್. ಎಲ್. ಸಿ. ಮತ್ತು ಅದಕ್ಕಿಂತ ಹೆಚ್ಚಿಗೆ ಓದಿರುವವರು ೨,೨೬,೯೭೨ ಜನ ನೊಂದಾಯಿಸಿದ್ದಾರೆ. ಪದವೀಧರರುಗಳು ಆರ್ಟ್ಸ್, ಸೈನ್ಸ್ ಮತ್ತು ಕಾಮರ್ಸ್ ಮೂರೂ ಸೇರಿ ೫೩,೩೦೭ ಜನ ಮತ್ತು ಪೋಸ್ಟ್‌ಗ್ರಾಜುಯೇಟ್ಸ್ ೫,೬೮೯ ಜನ, ಡಿಪ್ಲೊಮಾ ಹೋಲ್ಡರ್ಸ್ ೪,೭೩೭ ಜನ, ಇಂಜಿನಿಯರಿಂಗ್ ಗ್ರಾಜುಯೇಟ್ಸ್ ೨,೨೦೦ ಜನ ನಿರುದ್ಯೋಗಿಗಳಿದ್ದಾರೆ. ಈ ರೀತಿ ಪಟ್ಟಿಯನ್ನು ನೋಡಿದಾಗ ಇವತ್ತು ವಿದ್ಯಾವಂತ ನಿರುದ್ಯೋಗಿಗಳ ಸಮಸ್ಯೆ ಎಷ್ಟರಮಟ್ಟಿಗಿದೆ ಎಂಬುದು ಗೊತ್ತಾಗುತ್ತದೆ. ಇವತ್ತು ಈ ನಿರುದ್ಯೋಗ ಸಮಸ್ಯೆ ಬೃಹದಾಕಾರವಾಗಿದೆ, ಜ್ವಲಂತವಾಗಿದೆ. ಇದರ ಸಲುವಾಗಿ ಸರ್ಕಾರ ಪ್ರಾಮಾಣಿಕವಾದ ಪ್ರಯತ್ನವನ್ನು ಏನೂ ಮಾಡಿಲ್ಲ ಎಂದು ನಾವು ಆಪಾದನೆ ಮಾಡಬೇಕಾಗಿದೆ. ವರ್ಷೇ ವರ್ಷೇ ಸಾವಿರಾರು ಜನ ತಮ್ಮ ಹೆಸರುಗಳನ್ನು ಉದ್ಯೋಗವಿನಿಮಯ ಕಚೇರಿಗಳಲ್ಲಿ ನೋಂದಾಯಿಸುತ್ತಿರುತ್ತಾರೆ. ಉದ್ಯೋಗ ವಿನಿಮಯ ಕಚೇರಿಗಳಲ್ಲಿ ನೋಂದಾಯಿಸಿರುವವರ ಅಂಕಿಸಂಖ್ಯೆ ಇಷ್ಟಾದರೆ ಇನ್ನು ಅಲ್ಲಿ ತಮ್ಮ ಹೆಸರನ್ನು ದಾಖಲು ಮಾಡದೇ ಇರುವವರ ಸಂಖ್ಯೆಯೂ ಸೇರಿಸಿದರೆ ಎಷ್ಟಾಗುತ್ತದೆ ಎಂಬುದನ್ನು ಗಮನಿಬೇಕಾಗುತ್ತದೆ. ಎಷ್ಟೋ ಜನ ಎಂಪ್ಲಾಯ್ಮೆಂಟ್ ಎಕ್ಸ್‌ಚೇಂಜ್‌ಗಳಲ್ಲಿ ತಮ್ಮ ಹೆಸರುಗಳನ್ನು ನೋಂದಾಯಿಸಿರುವುದಿಲ್ಲ, ಮತ್ತೆ ಕೆಲವು ಜನ ರಿಜಿಸ್ಟ್ರೇಷನ್ ಮಾಡಿರುವವರು ರಿನ್ಯೂ ಮಾಡುವುದಕ್ಕೆ ಹೋಗುವುದಿಲ್ಲ ಕಾರಣವೇನೆಂದರೆ ಏನು ಮಾಡಿದರೂ ಕೂಡ ಕೆಲಸ ಸಿಗುವುದಿಲ್ಲ ಎಂಬ ಬೇಜಾರು ಅವರಲ್ಲಿ ಉಂಟಾಗಿರುತ್ತದೆ. ಹೀಗಾಗಿ ರಿನ್ಯೂ ಮಾಡದೇ ಬಿಟ್ಟಿರುವವರೂ ಇದ್ದಾರೆ. ನಾವು ಬರೀ ಎಂಪ್ಲಾಯ್‌ಮೆಂಟ್ ಎಕ್ಸ್‌ಚೇಂಜ್‌ನಲ್ಲಿ ರಿಜಿಸ್ಟರ್ ಮಾಡಿರುವವರ ಲೆಕ್ಕದ ಪ್ರಕಾರ ತೆಗೆದುಕೊಂಡರೂ ಸುಮಾರು ೫ ಲಕ್ಷ ಜನ ನಿರುದ್ಯೋಗಿಗಳು ಕರ್ನಾಟಕ ರಾಜ್ಯದಲ್ಲಿದ್ದಾರೆ. ಇದಲ್ಲದೆ ಇನ್ನೂ ೫ ಲಕ್ಷ ಜನ ಎಂಪ್ಲಾಯ್‌ಮೆಂಟ್ ಎಕ್ಸ್‌ಚೇಂಜ್‌ನಲ್ಲಿ ರಿಜಿಸ್ಟರ್ ಮಾಡದೇ ಇರುವವರೂ ಬಹುಶಃ ಇರಬಹುದು. ಆಂದರೆ ಒಟ್ಟು ೧೦ ರಿಂದ ೧೨ ಲಕ್ಷ ಜನ ನಿರುದ್ಯೋಗಿಗಳು ಉದ್ಯೋಗ ಹುಡುಕುವ ಸಲುವಾಗಿ ಓಡಾಡುತ್ತಿದ್ದಾರೆ. ಈ ಸಮಸ್ಯೆ ಬಹಳ ಗಂಭೀರವಾದ ಸಮಸ್ಯೆಯಾಗಿ ಉಳಿದಿದ್ದು ಇದರ ಸಲುವಾಗಿ ಸರ್ಕಾರ ಹಲವಾರು ಯೋಜನೆಗಳನ್ನು ಹಾಕಿಕೊಳ್ಳಬೇಕು. ಉದಾಸೀನ ಮಾಡಿದರೆ ಈ ಸಮಸ್ಯೆ ಬಹಳ ಗಂಭೀರವಾದ ಸ್ವರೂಪವನ್ನು ತಾಳುವುದಕ್ಕೆ ಸಾಧ್ಯವಾಗಬಹುದು ಒಂದು ಗಾಧೆ ಮಾತು ನೆನಪಿಗೆ ಬರುತ್ತಿದೆ, ಆದೇನೆಂದರೆ ''ಹುಡುಗ ಕೂತು ಕೆಟ್ಟ, ಹುಡುಗಿ ತಿರುಗಿ ಕೆಟ್ಟಳು'' ಅಂತ. ಹೀಗೆ ಹುಡುಗ ವ್ಯಾಸಂಗವನ್ನು ಮುಗಿಸಿದಮೇಲೂ ಮನೆಯಲ್ಲಿ ಸುಮ್ಮನೆ ಕೂಡುವಂತ ಪ್ರಸಂಗ ಬಂದರೆ ಅವನ ಮನಸ್ಸು ಏನಾಗುತ್ತದೆ ಎಂಬುದನ್ನು ನೋಡಬೇಕು. ''Empty mind is a devils workshop'' ಎಂದು ಹೇಳುತ್ತಾರೆ. ಆ ರೀತಿ ಆಗಬಾರದು. ''ಕಾಯಕವೇ ಕೈಲಾಸ'' ಎಂದು ಬಸವಣ್ಣನವರು ಹೇಳಿದ್ದಾರೆ. ಕೈಗೆ ಕೆಲಸ ಬೇಕು, ಕೈಗೆ ಕೆಲಸ ಸಿಕ್ಕಿದರೆ ಮನಸ್ಸಿಗೂ ಬುದ್ಧಿಗೂ ಕೆಲಸ ಸಿಗುತ್ತದೆ. ಈ ಕೆಲಸ ಕೊಡಿಸುವ ಜವಾಬ್ದಾರಿ ಸರ್ಕಾರದ ಮೇಲಿದೆ. ಅದು ರಾಜ್ಯ ಸರ್ಕಾರದ ಕರ್ತವ್ಯ. ಇವತ್ತು ಎಲ್ಲರಿಗೂ ಸರಿಯಾದಂಥ ಉದ್ಯೋಗವನ್ನು ಕೊಡಿಸುವುದರಲ್ಲಿ ಸರ್ಕಾರ ವಿಫಲವಾಗುವುದಾದರೆ ಇನ್ನು ಯಾವ ಸಮಸ್ಯೆಯನ್ನು ಸರ್ಕಾರ ಬಗೆಹರಿಸುವುದಕ್ಕೆ ಸಾಧ್ಯ ಎಂಬುದನ್ನು ಯೋಚನೆ ಮಾಡಬೇಕಾಗಿದೆ. ಇವತ್ತು ರಾಷ್ಟ್ರದ, ರಾಜ್ಯದ ಭವಿಷ್ಯ ಇರುವುದು ತರುಣ ಜನಾಂಗದ ಕೈಯಲ್ಲಿ. ಅಂಥದ್ದರಲ್ಲಿ ಆ ತರುಣ ಜನಾಂಗಕ್ಕೆ ಕೆಲಸವಿಲ್ಲದೇ ದಿನೇ ದಿನೇ ಓಡಾಡುತ್ತಿದ್ದರೆ ಪರಿಸ್ಥಿತಿ ಇನ್ನೂ ಗಂಭೀರವಾಗುವುದಕ್ಕೆ ಸಾಧ್ಯವಾಗುತ್ತದೆ. ಆದ್ದರಿಂದ ಮಾನ್ಯ ಸರ್ಕಾರದವರು ಇದರ ಬಗ್ಗೆ ಸರಿಯಾದ ಯೋಜನೆಗಳನ್ನು ಹಾಕಿಕೊಳ್ಳುವುದಕ್ಕೆ ಪ್ರಯತ್ನ ಮಾಡಬೇಕು. ಇನ್ನು ಎರಡನೆಯದಾಗಿ ಹೇಳುವುದಾದರೆ ಕರ್ನಾಟಕ ಸರ್ಕಾರದವರು ಇಂಡಸ್ಟ್ರಿಯಲ್ ಟ್ರೈನಿಂಗ್ ಇನ್‌ಸ್ಟಿಟ್ಯೂಟ್‌ಗಳನ್ನು ನಡೆಸಿ ಹಲವಾರು ಕ್ಷೇತ್ರಗಳಲ್ಲಿ ವೊಕೇಷನಲ್ ಟ್ರೈನಿಂಗ್ ಕೊಡುತ್ತಿದ್ದಾರೆ. ಟೆಕ್ನಿಕಲ್ಲಾಗಿ ಟ್ರೈನಿಂಗ್ ಮಾಡಿಕೊಂಡರೆ ಬೇಗ ಕೆಲಸ ಸಿಗುತ್ತದೆ ಎಂಬ ಕಾರಣದಿಂದ ಅದಕ್ಕೆ ಹೆಚ್ಚು ಹೆಚ್ಚು ವಿದ್ಯಾರ್ಥಿಗಳು ಸೇರುವುದಕ್ಕೆ ಬಯಸುತ್ತಾರೆ ಆದರೆ ಬೆಂಗಳೂರಿನಲ್ಲೇ ಆಗಲಿ ಇನ್ನಿತರ ಭಾಗಗಳಲ್ಲೇ ಆಗಲಿ ಇಂಡಸ್ಟ್ರಿಯಲ್ ಟ್ರೈನಿಂಗ್ ಇನ್‌ಸ್ಟಿಟ್ಯೂಟ್‌ಗಳಲ್ಲಿ ಕನ್ನಡಿಗರಿಗೆ ಪ್ರವೇಶ ಹೆಚ್ಚಾಗಿ ಸಿಗುತ್ತಿಲ್ಲ. ತಮಿಳುನಾಡು ಮುಂತಾದ ಕಡೆಯಿಂದ ಬರತಕ್ಕವರಿಗೇ ಜಾಸ್ತಿ ಸೀಟುಗಳು ದೊರೆಯುತ್ತಿದ್ದು ಕನ್ನಡಿಗರಿಗೆ ಸಿಗುವುದಿಲ್ಲ. ಮೊದಲನೇ ಪರೀಕ್ಷೆಯಲ್ಲೇ ಕನ್ನಡದ ಹುಡುಗರು ಫೇಲಾಗಿರುತ್ತಾರೆ. ಆದರ ಸಲುವಾಗಿ ಸರ್ಕಾರದವರು ಐ. ಟಿ. ಐ. ಪ್ರಿನ್ಸಿಪಾಲರಿಗೆ ಸೂಚನೆ ಕೊಟ್ಟು ಕನ್ನಡಿಗರಿಗೆ ಅಲ್ಲಿ ಪ್ರವೇಶ ಸಿಗುವಂತೆ ಪ್ರಯತ್ನ ಮಾಡಬೇಕೆಂದು ಸಲಹೆ ಮಾಡುತ್ತೇನೆ. ಮತ್ತೊಂದು ವಿಷಯವೇನೆಂದರೆ ಎಂಪ್ಲಾಯ್‌ಮೆಂಟ್ ಅಂಡ್ ಟ್ರೈನಿಂಗ್ ಇಲಾಖೆಯವರು ಒಳ್ಳೆಯ ಯೋಜನೆಯನ್ನು ನಿರೂಪಿಸಿದ್ದಾರೆ. ಆದನ್ನು ಈ ಸದನದ ಗಮನಕ್ಕೆ ತರಲಿಕ್ಕೆ ಇಚ್ಛಿಪಡುತ್ತೇನೆ.

It is stated that it is obligatory on the part of the employer in the public sector and those engaged in non-agricultural activities and if they employ more than 25 persons in the private sector they have to notify the vacancies arising in their establishment and also periodical returns have to be submitted. Further some concerns have violated the provision of the act. What action you have taken against them? ೧೦೦ಕ್ಕೆ ೯೦ ಮಂದಿ ಪ್ರೈವೇಟ್ ಎಂಪ್ಲಾಯರ್ಸ್ ಯಾವಾಗಲೂ ತಮ್ಮ ಕಾನೂನನ್ನು ಮುರಿಯುತ್ತಾರೆ. ಆದ್ದರಿಂದ ಅವರ ಮೇಲೆ ಡೈರೆಕ್ಟರ್ ಆಫ್ ಎಂಪ್ಲಾಯ್‌ಮೆಂಟ್ ಅಂಡ್ ಟ್ರೈನಿಂಗ್ ಅವರು ಸದಾ ಕಣ್ಣಿಟ್ಟಿರಬೇಕು. ಆ ರೀತಿ ಮಾಡುವುದಾದರೆ ನಿರುದ್ಯೋಗ ಸಮಸ್ಯೆಯನ್ನು ಸ್ವಲ್ಪಮಟ್ಟಿಗಾದರೂ ಬಗೆಹರಿಸುವುದಕ್ಕೆ ಸಾಧ್ಯವಾದೀತು ಎಂದೆನಿಸುತ್ತದೆ. ಕನಿಷ್ಠ ೨೫ ಕೆಲಸಗಾರರು ಇರಬೇಕು ಎಂದು ತಾವು ಹೇಳುತ್ತೀರಿ. ತಾವು ಇದಕ್ಕೆ ತಿದ್ದುಪಡಿ ತಂದು ಕನಿಷ್ಠ ನೌಕರರು ೧೦ ಎಂದು ಮಾಡಿದರೆ ಅನುಕೂಲವಾಗುತ್ತದೆ. ಆ ರೀತಿ ಮಾಡಿದರೆ ಕಾನೂನನ್ನು ಮುರಿಯುವುದನ್ನು ತಪ್ಪಿಸಬಹುದು. The Department was abled to identify 338 new es ablishments in the public sector and 4,258 in the private sector. ಎಂದು ಹೇಳಿದ್ದಾರೆ. ಇದು ಸಮಾಧಾನಕರವಾದ ವಿಷಯ. ಎಂಪ್ಲಾಯ್‌ಮೆಂಟ್ ಎಕ್ಸ್‌ಚೇಂಜ್‌ನಿಂದ ಎಲ್ಲರೂ ಹೆಸರುಗಳನ್ನು ತರಿಸಿಕೊಂಡು ಕೆಲಸ ಕೊಡುವಂತೆ ಮಾಡಿದರೆ ಈ ನಿರುದ್ಯೋಗ ಸಮಸ್ಯೆಯನ್ನು ಬಗೆಪರಿಸುವುದಕ್ಕೆ ಸಾಧ್ಯವಾಗುತ್ತದೆ. ಆದ್ದರಿಂದ ಸರ್ಕಾರದವರು ಈ ಬಗ್ಗೆ ಬೇರೆ ಬೇರೆ ಯೋಚನೆಗಳನ್ನು ಹಾಕಿಕೊಳ್ಳಬೇಕು. ಕೊನೆಯದಾಗಿ ಒಂದು ಮಾತನ್ನು ಹೇಳುವುದಾದರೆ ಡೈರೆಕ್ಟರ್ ಆಫ್ ಎಂಪ್ಲಾಯ್‌ಮೆಂಟ್ ಅಂಡ್ ಟ್ರೈನಿಂಗ್ ಮತ್ತು ಲೇಬರ್ ಡಿಪಾರ್ಟ್‌ಮೆಂಟ್–they must go hand in hand. ಆ ರೀತಿ ಮಾಡಿದರೆ ಕಾರ್ಮಿಕರ ಸಮಸ್ಯೆಯನ್ನು ತಿಳಿದುಕೊಳ್ಳುವುದಕ್ಕೆ ಮತ್ತು ನಿರುದ್ಯೋಗ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಅನುಕೂಲವಾಗುತ್ತದೆ. ಈ ಕಾರ್ಮಿಕರ ಸಮಸ್ಯೆ ಮತ್ತು ನಿರುದ್ಯೋಗ ಸಮಸ್ಯೆ ಎರಡೂ ಮಹತ್ವವಾದುದು. ಈ ಸಮಸ್ಯೆ ಬಗೆಹರಿಸದೆ ಇಡೀ ವಿಶ್ವವೇ ಎರಡು ಭಾಗವಾಗುವುದಕ್ಕೆ ಕಾರಣ ಆಗಿದೆ. "Haves and have nots" ಎಂಬ ಸಿದ್ಧಾಂತಗಳು. ಆದ್ದರಿಂದ ಕಾರ್ಮಿಕನಿಗೆ ಸರಿಯಾದಂಥ ಸೌಲಭ್ಯಗಳನ್ನು ಎಂಪ್ಲಾಯರ್ ಕೊಡದೇ ಇದ್ದರೆ ಬಹಳ ಜ್ವಲಂತವಾದ ಸಮಸ್ಯೆಯಾಗುತ್ತದೆ. ಈ ಸಮಸ್ಯೆ ರಾಜ್ಯ ಮತ್ತು ರಾಷ್ಟ್ರದಲ್ಲಿ ಎರಡೂ ಕಡೆ ಇದೆ. ಆದುದರಿಂದ ಕಾರ್ಮಿಕರಿಗೆ ಕೊಡತಕ್ಕ ಸವಲತ್ತುಗಳನ್ನು ಕೊಡಲಿಕ್ಕೇಬೇಕು. ಇವತ್ತು ಬೆಂಗಳೂರು ಅಂತರರಾಷ್ಟ್ರೀಯ ಪಟ್ಟಣ. ಇಲ್ಲಿ ಅನೇಕ ಕೇಂದ್ರ ಸರ್ಕಾರದ ದೊಡ್ಡ ದೊಡ್ಡ ಕೈಗಾರಿಕೆಗಳಿವೆ. ಉದಾಹರಣೆಗೆ ಹೇಳುವುದಾದರೆ ಎಚ್.ಎ.ಎಲ್., ಬಿ.ಇ.ಎಲ್., ಐ.ಟಿ.ಐ. ಮುಂತಾದ ದೊಡ್ಡ ದೊಡ್ಡ ಕೇಂದ್ರ ಸರ್ಕಾರದ ಕಾರ್ಖಾನೆಗಳಿದ್ದರೂ ಕೂಡ ಅಲ್ಲಿ ಇವತ್ತಿನ ದಿವಸ ನಾವು ಹೋಗಿ ನೋಡಿದರೆ ಕನ್ನಡದವರು ಗಣನೀಯವಾದ ಸಂಖ್ಯೆಯಲ್ಲಿ ಇಲ್ಲ. ಕನ್ನಡಿಗರನ್ನು ಅತ್ಯಂತ ಕೀಳಾಗಿ ಕಾಣುತ್ತಿದ್ದಾರೆ. Negligible representations have been given in all these factories. ಇವತ್ತು ಮಹಾರಾಷ್ಟ್ರಕ್ಕೆ ನೀವು ಹೋಗಿ ನೋಡಿ. ಮಹಾರಾಷ್ಟ್ರದಲ್ಲಿ ಮತ್ತು ತಮಿಳುನಾಡಿನಲ್ಲಿ ಇರತಕ್ಕ ಕಾರ್ಖಾನೆಗಳಲ್ಲಿ ಕನ್ನಡದವರು ಎಷ್ಟು ಇದ್ದಾರೆ ಎಂದು ನೋಡಿದರೆ ಒಂದೆರಡು ಪರ್ಸೆಂಟ್ ಕೂಡ ಸಿಕ್ಕುವುದಿಲ್ಲ. ಕರ್ನಾಟಕದಲ್ಲಿ ಇರುವಂಥ ಕಾರ್ಖಾನೆಗಳಲ್ಲಿ ಕನ್ನಡಿಗರಿಗೆ ಯಾವರೀತಿಯಾದ ಸ್ವಾಭಿಮಾನವಿಲ್ಲ. ಸರಿಯಾದಂಥ, ನ್ಯಾಯವಾದಂಥ ರೀತಿಯಲ್ಲಿ ಕನ್ನಡಿಗರನ್ನು ಈ ಫ್ಯಾಕ್ಟರಿಗಳಲ್ಲಿ ತೆಗೆದುಕೊಂಡಿಲ್ಲ. ಐ.ಎ.ಎಸ್. ಆಫೀಸರ್ ಹನುಮಾನ್‌ರವರು ಬಿ.ಇ.ಎಲ್.ನಲ್ಲಿ ಅಡ್ಮಿನಿಸ್ಟ್ರೇಟೀವ್ ಆಫೀಸರ್ ಆಗಿದ್ದಾಗ ಅವರು ಕೆಲವು ಜನ ಕನ್ನಡಿಗರನ್ನು ಸೇರಿಸುವುದಕ್ಕೆ ಪ್ರಯತ್ನಪಟ್ಟರು. ಅದು ಅಭಿನಂದನೀಯ. ಉಳಿದ ಐ.ಟಿ.ಐ., ಎಚ್.ಎ.ಎಲ್. ಮುಂತಾದ ಫ್ಯಾಕ್ಟರಿಗಳಲ್ಲಿ ಈ ಕೆಲಸ ನಡೆದಿಲ್ಲ. ಅಲ್ಲಿ ಕನ್ನಡಿಗರನ್ನು ಕೇಳುವವರೇ ಇಲ್ಲ.

೬–೦೦ ಪಿ. ಎಂ.

ಶ್ರೀ ಬಿ. ವಿ. ಕಕ್ಕಿಲಾಯ.—ಮಾನ್ಯ ಸ್ನೇಹಿತರು ಕನ್ನಡಿಗರ ಬಗ್ಗೆ ಬಹಳ ಕಳಕಳಿ ವ್ಯಕ್ತಪಡಿಸಿದರು. ಆಡಳಿತದಲ್ಲಿ ಕನ್ನಡಿಗರಿಗೆ ಸ್ಥಾನ ಇಲ್ಲ. ನಮ್ಮ ರಾಜ್ಯದಲ್ಲಿ ಕೇಂದ್ರ ಸರ್ಕಾರದ ಅಧೀನದಲ್ಲಿರತಕ್ಕ ಕೈಗಾರಿಕೆಗಳಲ್ಲಿ ಶೋಕಾಸ್ ನೋಟೀಸ್ ಕೊಡುವುದು, ವಿಚಾರಣೆ ನಡೆಸುವುದು

ಆಡ್‌ವರ್‌ಟೈಸ್‌ಮೆಂಟ್ ಮಾಡುವುದು ಇದೆಲ್ಲವನ್ನೂ ಹಿಂದಿಯಲ್ಲಿ ಮಾಡಬೇಕು ಎಂದು ಸುತ್ತೋಲೆ ಯನ್ನು ಕೇಂದ್ರ ಸರ್ಕಾರದವರು ಕೊಟ್ಟಿರುವುದು ಪತ್ರಿಕೆಯಲ್ಲಿ ಬಂದಿದೆ. ಇದರ ಬಗ್ಗೆ ಮಾನ್ಯ ಸದಸ್ಯರ ಅಭಿಪ್ರಾಯ ಏನು ಎಂದು ಕೇಳುತ್ತೇನೆ.

ಶ್ರೀ ಎಸ್. ಎಸ್. ಅರಕೇರಿ.—ಅದು ಈಗಿನದಲ್ಲ. ಹಳೇ ಕಾಲದವು.

(ವಿರೋಧಪಕ್ಷದ ಅನೇಕ ಜನ ಸದಸ್ಯರು ಏಕಕಾಲದಲ್ಲಿ ಎದ್ದು ಮಾತನಾಡತೊಡಗಿದರು)

ಛೇರ್ಮನ್‌ರವರು.—ಮಾನ್ಯ ಕಕ್ಕಿಲಾಯ ಅವರು ಮಾನ್ಯ ಅರಕೇರಿಯವರಿಗೆ ಪ್ರಶ್ನೆ ಹಾಕಿದ್ದಾರೆ, ಅವರು ಉತ್ತರ ಕೊಡುತ್ತಾರೆ, ನಿಮ್ಮ ಅಭಿಪ್ರಾಯವನ್ನು ಆಮೇಲೆ ಹೇಳಿ.

ಶ್ರೀ ಗೋವಿಂದ ಪಿ. ಒಡೆಯರಾಜ್.— ಮಾನ್ಯ ಕಕ್ಕಿಲಾಯ ಅವರಿಗೆ ಫ್ಯಾಕ್ಟರಿಗಳಲ್ಲಿ ಕನ್ನಡಿಗರಿಗೆ ಪ್ರಾತಿನಿಧ್ಯ ಕೊಡುವುದು ಬೇಡವೆ.

ಶ್ರೀ ಬಿ.ವಿ. ಕಕ್ಕಿಲಾಯ.— ಕರ್ನಾಟಕದಲ್ಲಿ ಕನ್ನಡಿಗರಿಗೆ ಪ್ರಾಶಸ್ತ್ಯ ಕೊಡಬೇಕು ಎಂದು ಹೇಳಿದೆ.

ಶ್ರೀ ಎಸ್.ಎಸ್. ಅರಕೇರಿ.— ಅದಕ್ಕೆ ನಾನು ಉತ್ತರ ರೂಪವಾಗಿ ಹೇಳುವುದಾದರೆ, ಈಗ ಒಂದು ನಿಯಮವಿದೆ. ಏನೆಂದರೆ ಯಾವ ಫ್ಯಾಕ್ಟರಿಯನ್ನು ಎಲ್ಲಿ ಹಾಕುತ್ತಾರೋ ಅಥವಾ ತೆರೆಯುತ್ತಾರೆಯೋ ಆ ಭಾಗದಲ್ಲಿರತಕ್ಕ ಜನರಿಗೆ ೧೦೦ಕ್ಕೆ ೬೦ ರಂತೆ ಕೆಲಸಗಳನ್ನು ಕೊಡಬೇಕು ಎಂದು ನಿಯಮ ಇದೆ. ಕರ್ನಾಟಕ ರಾಜ್ಯದಲ್ಲಿ ೧೦೦ಕ್ಕೆ ೬೦–೭೦ ಪರ್ಸೆಂಟ್ ಹೆಚ್ಚು ಕನ್ನಡಿಗರನ್ನು ಫ್ಯಾಕ್ಟರಿಗಳಲ್ಲಿ ತೆಗೆದು ಕೊಳ್ಳುವುದು ನ್ಯಾಯ. ಇವತ್ತು ಕರ್ನಾಟಕದಲ್ಲಿ ಫ್ಯಾಕ್ಟರಿಗಳನ್ನು ಏನು ಹಾಕಿದ್ದಾರೆ, ಮತ್ತು ತೆರೆದಿದ್ದಾರೆ ಅವರಿಗೆ ಕರ್ನಾಟಕ ಸರ್ಕಾರದವರು ನೂರಾರು ಎಕರೆ ಜಮೀನು ಕೊಟ್ಟಿದೆ ಮತ್ತು ಕೊಟ್ಟಿದ್ದಾರೆಅವರು ಆಯಾ ಕಾರ್ಖಾನೆಗಳ ಆಡಳಿತಗಾರರು. ಕನ್ನಡದ ನೆಲ, ಜಲವನ್ನು ಬಳಸಿಕೊಂಡು ಕನ್ನಡಿಗರಿಗೆ ಆ ಫ್ಯಾಕ್ಟರಿಗಳಲ್ಲಿ ಕೆಲಸ ಕೊಡುತ್ತಾ ಇಲ್ಲ ಎಂದರೆ ಎಂತಹ ದ್ರೋಹ ಮಾಡುತ್ತಿದ್ದಾರೆ ಎಂದು ನಾನು ಕೇಳುತ್ತೇನೆ. ಆದುದರಿಂದ ಕರ್ನಾಟಕ ಸರ್ಕಾರದವರು ಕನ್ನಡಿಗರಿಗೆ ರಕ್ಷಣೆ ಕೊಡಬೇಕು. Whether they have appointed some importent officers to safeguard the interests of the Kannada people in all these factories? Is it not high time for the Government of Karnataka to press for the representation of Kannada people in all cadres in these important factories. ಇಲ್ಲಿ ಪ್ರಯತ್ನ ಮಾಡುವುದಾದರೆ ನಿರುದ್ಯೋಗ ಸಮಸ್ಯೆಯನ್ನು ಬಗೆಹರಿಸಲಿಕ್ಕೆ ಸ್ವಲ್ಪ ಮಟ್ಟಿಗೆ ಸಹಾಯವಾಗುತ್ತದೆ ಎನ್ನುವುದೇ ನನ್ನ ಕಳಕಳಿ.

ಇನ್ನೊಂದು ವಿಚಾರವೇನೆಂದರೆ, ನಮ್ಮ ರಾಜ್ಯದಲ್ಲಿ ರಾಜ್ಯಸರ್ಕಾರದ ಫ್ಯಾಕ್ಟರಿಗಳಿವೆ. ಎನ್.ಜಿ. ಎಫ್. ಮುಂತಾದ ಫ್ಯಾಕ್ಟರಿಗಳಿವೆ. ಇದರಲ್ಲಿ ಒಂದು ಸಮಸ್ಯೆ ಇದೆ. ಮಾನ್ಯ ಸಚಿವರ ಗಮನಕ್ಕೆ ತರುವುದೇನೆಂದರೆ, ರಾಜ್ಯಸರ್ಕಾರ ಫ್ಯಾಕ್ಟರಿಗಳಲ್ಲಿಯು ಕೆಲಸಗಾರರಿಗೆ ಪ್ರೊಫಷನಲ್ ಟ್ಯಾಕ್ಸ್ ಏನು ಹಾಕುತ್ತಿದ್ದಾರೆ ಇದನ್ನು ಸಾಧ್ಯವಾದಷ್ಟು ತೆಗೆದುಹಾಕಿದರೆ ಒಳ್ಳೆಯದು. ಇದರ ಬಗ್ಗೆ ಮಾನ್ಯ ಸಚಿವರು ಗಮನಕೊಡಬೇಕೆಂದು ಹೇಳುತ್ತೇನೆ. ಹೋಟೆಲ್ ವರ್ಕರ್ಸ್ ಮತ್ತು ಫ್ಯಾಕ್ಟರಿ ವರ್ಕರ್ಸ್ ಹೊಟ್ಟೆಗೆ ಹಿಟ್ಟು, ಮೈಗೆ ಬಟ್ಟೆ, ಇರಲಿಕ್ಕೆ ವಸತಿ ಸಲುವಾಗಿ ಮತ್ತು ಬೋನಸ್ ಕೊಡಲಿಲ್ಲ ಎಂದು ಚಳುವಳಿ ಹೂಡುತ್ತಾರೆ, ಹಾಗೂ ಯಾವುದೇ ಒಂದು ರೂಪದಲ್ಲಿ ಪ್ರೊಟೆಸ್ಟ್ ಮಾಡುತ್ತಾರೆ. ಆದರೆ ಕರ್ನಾಟಕ ರಾಜ್ಯದಲ್ಲಿ ಲ್ಯಾಂಡ್‌ಲೆಸ್ ಲೇಬರರ್ಸ್ (ಕೃಷಿಕಾರ್ಮಿಕರು) ಸಮಾರು ೫೦ ಲಕ್ಷ ಕೂಲಿಗಾರರು ಇದ್ದಾರೆ, ಕೃಷಿ ಕೆಲಸಮಾಡುವವರು ಏನಿದ್ದಾರೆ ಆ ಕಾರ್ಮಿಕರ ಗತಿ ಏನು ಎಂದು ಸರ್ಕಾರ ವಿಚಾರ ಮಾಡಿದೆಯೇ? I am asking the Government of Karnataka what welfares measures they have taken for the benefit and security of landless Agri labourers or labourers who are werking entirely in the agrucultural lands agricultural fields, estates or gardens. ಇವರಿಗೆ ಜಾಬ್ ಸೆಕ್ಯೂರಿಟಿ ಏನು ಕೊಟ್ಟಿದ್ದೀರಿ. ಮಿನಿಮಂ ವೇಜಸ್ ಆಕ್ಟ್‌ನ್ನು ಕನಿಷ್ಠ ವೇತನ ಏನು ತಂದಿದ್ದೀರಿ ಆದರಿಂದ ಜಮೀನಿನಲ್ಲಿ ಕೆಲಸಮಾಡುವಂಥ ಕೂಲಿಗಾರರಿಗೆ ಉಪಯೋಗವಾಗುತ್ತಿಲ್ಲ. ಆದರಲ್ಲಿ ಆ ಕಾನೂನಿನಲ್ಲಿ ಕೂಲಿಗಾರರಿಗೆ ೩–೫೦ ರೂಪಾಯಿನಿಂದ ೫–೫೦ ರೂಪಾಯಿವರೆಗೆ ಕೂಲಿ ಕೊಡಬೇಕು ಎಂದು ಇದೆ. ರೈತ ಅಷ್ಟು ಕೂಲಿ ಕೊಡಲಿಕ್ಕೆ ತಯಾರಿರುವುದಿಲ್ಲ. ೧–೫೦ ರಿಂದ ೨–೦೦ ರೂಪಾಯಿಗೆ ಹಳ್ಳಿಗಳಲ್ಲಿ ದುಡಿಯಬೇಕಾಗುತ್ತದೆ.

ಹೀಗಾದರೆ ನೀವು ಯಾವರೀತಿ ಕೂಲಿಗಾರರಿಗೆ ಸರಿಯಾದ ಕೂಲಿ ಕೊಡುವುದಕ್ಕೆ ಸಾಧ್ಯ ಎನ್ನುವುದನ್ನು ಸರ್ಕಾರ ಯೋಚನೆಮಾಡಬೇಕು. ವರ್ಷದ ೧೨ ತಿಂಗಳಲ್ಲಿ ಕೃಷಿ ಕಾರ್ಮಿಕರಿಗೆ ಕೇವಲ ೩ ತಿಂಗಳು ಮಾತ್ರ ಕೆಲಸ ಸಿಗುತ್ತದೆ. ಇನ್ನು ೯ ತಿಂಗಳು ಅವರು ಏನು ಮಾಡಬೇಕು; ಅವರಿಗೆ ಬೇರೆ ಯಾವರೀತಿ ಉದ್ಯಮ ಕಲ್ಪಿಸಲಿಕ್ಕೆ ಮಾಡಿದ್ದೀರಿ ಎನ್ನುವುದು ಒಂದು ಜ್ವಲಂತ ಪ್ರಶ್ನೆ ಇದೆ, ನನ್ನ ಕ್ಷೇತ್ರದಲ್ಲಿ ಕೂಲಿಗಾರರು ಗೂಳೆ ಕಟ್ಟಿಕೊಂಡು ಮಹಾರಾಷ್ಟ್ರಕ್ಕೆ ಕೆಲಸಗಳಿಗಾಗಿ ಹೊರಟು ಹೋಗುತ್ತಿರುತ್ತಾರೆ ಉದಾಹರಣೆಗೆ ಹೇಳುವುದಾದರೆ ಬಿಜಾಪುರ ಜಿಲ್ಲೆ ಹಿಂದುಳಿದ ಜಿಲ್ಲೆ. ಅಲ್ಲಿ ಫ್ಯಾಕ್ಟರಿಗಳನು ತೆಗೆದು ಹೊಲದಲ್ಲಿ ದುಡಿಯುವವರಿಗೆ ಆಲ್ಟರ್‌ನೇಟೀವ್ ಎಂಪ್ಲಾಯ್‌ಮೆಂಟ್‌ನ್ನು ಕಲ್ಪಿಸಿ ಜಾಬ್ ಸೆಕ್ಯೂರಿಟಿ ಕೊಡಿ. ಎಂಪ್ಲಾಮೆಂಟ್ ಇನ್‌ಷ್ಯೂರೆನ್ಸ್ ಸ್ಕೀಮನ್ನು ಜಾರಿಗೆ ತನ್ನಿ. ಏಕೆಂದರೆ ಕೃಷಿ ಕಾರ್ಮಿಕರು ಸಂಘಟಿತ ಕಾರ್ಮಿಕರಲ್ಲ ಆದುದರಿಂದ ಅವರಿಗೆ ಅನ್ಯಾಯವಾದಾಗ ಚಳುವಳಿ ಹೂಡಲಿಕ್ಕೆ ಪ್ರೊಟೆಸ್ಟ್ ಮಾಡಲಿಕ್ಕೆ ಶಕ್ತಿ ಇಲ್ಲ. ಇದನ್ನು ಸರ್ಕಾರ ಮನಗಂಡು ಕಾರ್ಮಿಕರ ಕಲ್ಯಾಣಕ್ಕಾಗಿ ಅನೇಕ ಯೋಜನೆಗಳನ್ನು ಹಾಕಿಕೊಳ್ಳುವುದಾದರೆ ನಿಜವಾಗಿಯೂ ಅವರ ಕಲ್ಯಾಣವಾದೀತು, ನಿರುದ್ಯೋಗ ಸಮಸ್ಯೆ ಬಗೆಹರಿದೀತು ಎನ್ನುವ ಮಾತನ್ನು ಹೇಳಿ, ನನಗೆ ಎರಡು ಮಾತುಗಳನ್ನಾಡಲಿಕ್ಕೆ ಅವಕಾಶಕೊಟ್ಟ ಅಧ್ಯಕ್ಷರಿಗೆ ವಂದಿಸಿ, ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀಮತಿ ಸುಶೀಲಾ ಜೆಲ್ವರಾಜ್ (ಹೆಗ್ಗಡದೇವನಕೋಟೆ).— ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಗಳು ಮಂಡಿಸಿರತಕ್ಕಂಥ ಬೇಡಿಕೆಗಳನ್ನು ಸ್ವಾಗತಿಸುತ್ತಾ ಕೆಲವು ಸೂಚನೆಗಳನ್ನು ಕೊಡಬಯಸುತ್ತೇನೆ. ಮೊದಲನೆಯದಾಗಿ, ಕಾರ್ಮಿಕರ ಹಿತದೃಷ್ಟಿಯಿಂದ ಇ.ಎಸ್.ಐ. ಬಗ್ಗೆ ಕೆಲವು ಸೂಚನೆಗಳನ್ನು ಸೂಚಿಸುತ್ತೇನೆ. ಈಗಾಗಲೇ ಪೇಪರಿನಲ್ಲಿ ಓದಿದ್ದೇವೆ. ಗವರ್ನಮೆಂಟ್ ಮೆಡಿಕಲ್ ಸ್ಟೋರ್ ಇದ್ದರೂ ಸಹ ಅನ್ ರೆಕಗ್‌ನೈಸ್ಡ್ ಸ್ಟೋರ್ಸ್‌ನಿಂದ ಔಷಧಿಗಳನ್ನು ಕೊಂಡುಕೊಳ್ಳುತ್ತಿದ್ದಾರೆ ಎಂದು. ಇದರ ಎಫೆಕ್ಟ್ ಎಷ್ಟಾಗುತ್ತದೆ ಎನ್ನುವುದು ಎಲ್ಲರಿಗೂ ಗೊತ್ತಾಗಿದೆ. ಆದರಲ್ಲೂ ೫೦ ಪರ್ಸೆಂಟ್ ಮಾತ್ರ ಲೆಕ್ಕಕ್ಕೆ ಕೊಟ್ಟು ಇನ್ನು ೫೦ ಪರ್ಸೆಂಟ್ ಹಾಗೆಯೇ ಲೆಕ್ಕಕ್ಕೆ ಹಾಕಿಕೊಳ್ಳುತ್ತಾರೆ; ಮೆಡಿಸಿನ್ ಸಪ್ಲೈ ಮಾಡುವುದಿಲ್ಲ. ಆರಾರು ತಿಂಗಳಿಗೆ ಎಕ್ಸಪೀರಿಯನ್ಸ್ ಡಾಕ್ಟರುಗಳನ್ನು ವರ್ಗಾವಣೆಮಾಡಿ ಜೂನಿಯರ್ ಡಾಕ್ಟರುಗಳನ್ನು ಇಲ್ಲಿ ಇಡುತ್ತಾರೆ. ಗವರ್ನಮೆಂಟ್ ಮೆಡಿಕಲ್ ಸ್ಟೋರ್‌ನಿಂದ ಔಷಧಿಗಳನ್ನು ಕೊಂಡುಕೊಳ್ಳುವುದಿಲ್ಲ, ಅನ್ ರೆಕಗ್‌ನೈಸ್ಡ್ ಮೆಡಿಕಲ್ ಸ್ಟೋರ್ಸ್‌ನಿಂದ ಕಾರ್ಮಿಕರ ಹಿತದೃಷ್ಟಿಯಿಂದ ಔಷಧಿಗಳನ್ನು ಕೊಂಡುಕೊಳ್ಳಬಾರದು ಎಂದು ಸೂಚಿಸುತ್ತೇನೆ.

ಇನ್ನು ಎರಡನೆಯದಾಗಿ ಸ್ಪೆಷಲ್ ಡ್ರಗ್ಸ್ ಅಂತ ಇಟ್ಟಿದ್ದೀರಿ. ಇ.ಎಸ್.ಐ. ಹಾಸ್ಪಿಟಲ್‌ಗಳಲ್ಲಿ ಸ್ಪೆಷಲ್ ಡ್ರಗ್ಸ್ ಇದ್ದರೆ ಪರವಾಗಿಲ್ಲ ಇಲ್ಲದಿದ್ದರೆ ಅವನು ೧೦,೧೫ ಮೈಲಿ ದೂರ ಹೋಗಿ ಅದನ್ನು ಪರ್‌ಚೇಜ್ ಮಾಡಿಕೊಂಡು ಬಂದು ಆ ನಂತರ ಅದನ್ನು ರಿಇಂಬರ್ಸ್ ಮಾಡಿಕೊಳ್ಳಬೇಕು. ಆದು ರಿಇಂಬರ್ಸ್ ಆಗುವ ತನಕ ತನಕ ಕಾರ್ಮಿಕರು ಕಾಯಲು ಅಷ್ಟು ಹಣ ಅವರ ಹತ್ತಿರವಿರುವುದಿಲ್ಲ. ಆದುದರಿಂದ ಸ್ಪೆಷಲ್ ಡ್ರಗ್ಸ್ ಅಂತ ಏನು ಇದೆ ಅದನ್ನು ಆಯಾ ಆಸ್ಪತ್ರೆಗಳಲ್ಲಿಯೇ ದೊರೆಯುವ ವ್ಯವಸ್ಥೆ ಮಾಡಬೇಕು ಮತ್ತು ರಿಇಂಬರ್ಸ್‌ಮೆಂಟ್‌ನ್ನು ಕೂಡ ಆದಷ್ಟು ಬೇಗ ಕೊಡುವ ವ್ಯವಸ್ಥೆ ಮಾಡಬೇಕೆಂದು ಸೂಚನೆ ಮಾಡುತ್ತೇನೆ.

ಇನ್ನು ಗ್ರಾಮಾಂತರ ಪ್ರದೇಶಗಳಲ್ಲಿರುವ ಕಾರ್ಮಿಕರ ಹಿತದೃಷ್ಟಿಯಿಂದ ಹೇಳುವುದಾದರೆ ಯಾವ ಅಧಿಕಾರಿಗಳೂ ಅದರ ಕಡೆಗೆ ಹೆಚ್ಚಿನ ಗಮನವನ್ನು ಕೊಟ್ಟಿಲ್ಲ. ಜೀತಪದ್ಧತಿಯನ್ನು ತಾವು ತೆಗದು ಹಾಕಿದ್ದೀರಿ. ಅವರನ್ನು ಜೀತದಿಂದ ವಿಮುಕ್ತಿ ಮಾಡಿ ಅವರ ಕಷ್ಟವನ್ನು ಪರಿಹರಿಸಿದ್ದೀರಿ. ಆದರೆ ಅವರ ಮುಂದಿನ ಜೀವನಕ್ಕೆ ದಾರಿಯನ್ನು ಕಲ್ಪಿಸಿ ಕೊಟ್ಟಿಲ್ಲ, ಅಗ್ರಿಕಲ್ಚರಲ್ ಲೇಬರರ್ಸ್ ಮತ್ತು ಈ ಬಾಂಡೆಡ್ ಲೇಬರರ್ಸ್ ಯಾರಿದ್ದಾರೆ ಅವರಿಗೆ ಜಮೀನು ಆಗಲೀ ಅಥವಾ ಮತ್ತು ಇನ್ನು ಯಾವುದೇ ಸೌಲಭ್ಯವನ್ನಾಗಲೀ ಇಲ್ಲಿಯವರೆಗೆ ತಾವು ಕಲ್ಪಿಸಿ ಕೊಟ್ಟಿಲ್ಲವೆಂದು ಹೇಳುತ್ತೇನೆ. ಇನ್ನು ಸ್ಕೂಲ್‌ಗಳಿಗೆ ಹೋಗತಕ್ಕ ಮಕ್ಕಳು ೧೦–೧೨ ವರ್ಷದ ಮಕ್ಕಳು ಯಾರಿದ್ದಾರೆ ಅವರಲ್ಲಿ ಎಷ್ಟೋ ಮಕ್ಕಳು ಸ್ಕೂಲ್‌ಗಳಿಗೆ ಹೋಗದೇ ಅನಿವಾರ್ಯವಾಗಿ ಕೆಲಸ ಮಾಡಬೇಕಾದ ಪರಿಸ್ಥಿತಿ ನಮ್ಮ ದೇಶದಲ್ಲಿದೆ. ಆದುದರಿಂದ ಕಡ್ಡಾಯವಾಗಿ ವಿದ್ಯಾಭ್ಯಾಸ ಮಾಡುವ ಪದ್ಧತಿಯನ್ನು ತಾವು ಜಾರಿಗೆ ತರಬೇಕು. ಕೊನೆಯ ಪಕ್ಷ ೧೬ ವರ್ಷ ಆಗುವವರೆಗೂ ಯಾವ ಮಕ್ಕಳನ್ನೂ ಕೆಲಸಕ್ಕೆ ತೆಗೆದುಕೊಳ್ಳಬಾರದು ಆ ರೀತಿ ತೆಗೆದುಕೊಳ್ಳತಕ್ಕವರ ಮೇಲೆ ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ.

ಇನ್ನು ಎಕ್ಸೈಜ್ ಡಿಪಾರ್ಟ್‌ಮೆಂಟಿನ ಬಗ್ಗೆ ಹೇಳುವುದಾದರೆ, ಟೆಂಪರೆನ್ಸ್ ಬೋರ್ಡ್ ಎಂದು ಮಾಡಿದ್ದೀರಿ. ಆದರ ಉದ್ದೇಶವಾದರೂ ಏನು? ಕುಡಿಯುವುದು ತಪ್ಪು. ಪ್ರಾಹಿಬಿಷನ್ ಮಾಡಬೇಕು. ಯಾರೂ ಕುಡಿಯಬಾರದೆಂದು ಹೇಳುತ್ತಿರುವಾಗ, ಕುಡಿಯಿರಿ ಆದರೆ ಸ್ವಲ್ಪ ಕುಡಿಯಿರಿ ಎಂದು ಹೇಳುವುದರಲ್ಲಿ ಅರ್ಥವಿಲ್ಲ. ಅದಕ್ಕೆಂದು ಬೋರ್ಡ್ ಬೇರೆ ಮಾಡಿದ್ದೀರಿ ಆದಕ್ಕೆ ಎಷ್ಟು ಹಣ ಖರ್ಚಾಗುತ್ತದೆ ಎನ್ನುವ ಬಗ್ಗೆ ಎಸ್ಟಿಮೇಟ್ ಇದರಲ್ಲಿ ಎಲ್ಲೂ ಕಾಣುತ್ತಿಲ್ಲ. ಇದನ್ನು ಯಾವ ಬಾಬಿನಲ್ಲಿ ಇಟ್ಟಿದ್ದಾರೋ ಗೊತ್ತಿಲ್ಲ. ಆದುದರಿಂದ ಟೆಂಪರೆನ್ಸ್ ಬೋರ್ಡ್ ಎಂದು ಇರತಕ್ಕಂಥದ್ದು ಅರ್ಥವಿಲ್ಲದ್ದು ಆದು ಇರಕೂಡದೆಂದು ಹೇಳುತ್ತಿದ್ದೇನೆ.

ಇನ್ನು ಅಡಲ್ಟ್ರೇಷನ್ ವಿಚಾರ ಹೇಳುವುದಾದರೆ, ಕುಡಿಯುವುದು ಆರ್ಥಿಕ ದೃಷ್ಟಿಯಿಂದ ತಪ್ಪು ಎಂದು ಹೇಳುತ್ತಿರುವಾಗ, ಅದನ್ನು ಸಾಮಾನ್ಯವಾಗಿ ಕುಡಿಯುವವರು ಬಡ ಜನಗಳು, ಅವರು ಕುಡಿಯುವ ಆ ಶರಾಯಿನಲ್ಲಿ ಅದು ಏನೋ ಕೆಮಿಕಲ್ಸ್ ಉಪಯೋಗಿಸುತ್ತಾರಂತೆ ಇದರಿಂದ ಅವರ ಆರೋಗ್ಯವನ್ನೂ ಸಹ ಬಡವರು ಕೆಡಸಿಕೊಳ್ಳುತ್ತಿದ್ದಾರೆ. ಆದುದರಿಂದ ಈ ಅಡಲ್ಟ್ರೇಷನ್ನನ್ನು ತಪ್ಪಿಸುವ ಬಗ್ಗೆ ಸರ್ಕಾರದವರು ಸೂಕ್ತ ವ್ಯವಸ್ಥೆ ಮಾಡಬೇಕೆಂದು ಹೇಳುತ್ತೇನೆ. ಮತ್ತು ಈ ಹೆಂಡದ ಅಂಗಡಿಗಳನ್ನು ಎಲ್ಲಿ ಹರಿಜನರ ಕಾಲೋನಿಗಳಿವೆ. ಮತ್ತು ಸ್ಕೂಲ್ ದೇವಸ್ಥಾನಗಳು ಇವೆ ಅಲ್ಲಿಡಬಾರದು, ಆ ರೀತಿ ಇರದಂತೆ ನೋಡಿಕೊಳ್ಳಬೇಕೆಂದು ಸೂಚಿಸಿ ಇಷ್ಟು ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ತಮ್ಮನು ವಂದಿಸಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಬಿ.ವಿ. ಕಕ್ಕಿಲಾಯ.—(ವಿಟ್ಲ) ಸನ್ಮಾನ್ಯ ಅಧ್ಯಕ್ಷರೇ ಕಾರ್ಮಿಕ ಇಲಾಖೆ ಬಹಳ ಚುರುಕಾಗಿ ಕೆಲಸ ಮಾಡಬೇಕಾಗಿದೆ. ಏತಕ್ಕೆಂದರೆ ಕಾರ್ಮಿಕರ ಸಮಸ್ಯೆಗಳಿಗೂ ಮಾಲಕರಿಗೆ ಮತ್ತು ಕಾರ್ಮಿಕರಿಗೂ ಇರುವ ಸಂಬಂಧಪನ್ನು ಬಹಳ ಮುಖ್ಯವಾದ ವಿಚಾರಗಳೆಂದು ಸರ್ಕಾರ ವ್ಯವಹರಿಸಬೇಕಾಗಿದೆ. ಈ ಇಲಾಖೆ ನಿಜವಾಗಿಯೂ ನಿದ್ದೆ ಮಾಡುತ್ತಿದೆ ಎಂದು ಹೇಳಬೇಕಾಗಿದೆ. ಈ ಇಲಾಖೆಯ ಪರದಿಯ ಕೊನೆಯ ಪುಟದಿಂದ ಆರಂಭ ಮಾಡುತ್ತೇನೆ. ೧೭ನೇ ಪುಟದಲ್ಲಿ ಅವರು ಆಕ್ಸಿಡೆಂಟ್ ರೇಟನ್ನು ಕೊಟ್ಟಿದ್ದಾರೆ. ಈಗ ೧೦೦ ಜನ ಕೆಲಸಗಾರರು ಕೆಲಸಕ್ಕೆ ಹೋದರೆ ೪ ಜನ ವಾಪಸ್ಸು ಬರುವುದಿಲ್ಲ. ಉಳಿದವರು ಬರುತ್ತಾರೆ. ಬಂದರೂ ಕೆಲವರಿಗೆ ಕೈಕಾಲು ಮುರಿದಿರುತ್ತದೆ. ಕೆಲವರು ಸತ್ತು ಹೋಗಿರುತ್ತಾರೆ, ಆಕ್ಸಿಡೆಂಟ್ ರೇಟ್ ಬಹಳ ಜಾಸ್ತಿಯಾಗಿದೆ ಹಿಂದಿನ ವರ್ಷ ಅಂದರೆ ೧೯೭೬–೭೭ ರಲ್ಲಿ ಫ್ಯಾಟಲ್ ಆಕ್ಸಿಡೆಂಟ್ ೫೫ ಆಗಿದ್ದರೆ ೧೯೭೭–೭೮ರಲ್ಲಿ ೪೯ ಫ್ಯಾಟಲ್ ಆಕ್ಸಿಡೆಂಟ್ ಮತ್ತು ಉಳಿದಿದ್ದೆಲ್ಲಾ ಬರೀ ಆಕ್ಸಿಡೆಂಟ್ ಆಗಿದೆಂದು ಹೇಳಿದ್ದಾರೆ. ಆಕಸ್ಮಿಕ ಆದಾಗ ಆದರ ಬಗ್ಗೆ ವ್ಯವಹರಿಸುವುದಕ್ಕೆ ವರ್ಕ್ಸ್‌ಮೆನ್ಸ್ ಕಾಂಪನ್‌ಸೇಷನ್ ಆಕ್ಟ್ ಪ್ರಕಾರ ತಾವು ಕ್ರಮ ತೆಗೆದುಕೊಳ್ಳಬೇಕಾಗಿದೆ. ಆಕ್ಸಿಡೆಂಟನಲ್ಲಿ ಜನ ಸತ್ತು ಹೋದರೂ ಎಷ್ಟು ವರ್ಷಗಳಾದರೂ ಆದನ್ನು ತೀರ್ಮಾನ ಮಾಡುತ್ತಿಲ್ಲ. ಇದಕ್ಕೆ ಕಾರಣವೇನೆಂದರೆ ವರ್ಕ್ಸ್‌ಮೆನ್ಸ್ ಕಾಂಪನ್‌ಸೇಷನ್ ಆಕ್ಟ್‌ನ್ನು ಜಾರಿಗೆ ಗೊಳಿಸುವುದಕ್ಕೆ ಇರುವ ಅಧಿಕಾರವನ್ನು ರೆವಿನ್ಯೂ ಅಸಿಸ್ಟೆಂಟ್ ಕಮಿಷನರ್‌ರವರಿಗೆ ಕೊಟ್ಟಿದ್ದೀರಿ. ರೆವಿನ್ಯೂ ಅಸಿಸ್ಟೆಂಟ್ ಕಮೀಷನರ್‌ರವರಿಗೆ ಬೇರೆ ಹಲವಾರು ಕೆಲಸಗಳಿರುತ್ತವೆ. ಅವರು ಇದಕ್ಕೆ ಗಮನವನ್ನು ಹರಿಸುವುದಕ್ಕಾಗುವುದಿಲ್ಲ. ತುರ್ತು ಪರಿಸ್ಥಿತಿ ಕಾಲದಲ್ಲಿ ಮಾಸ್ ಕಾಂಟ್ಯಾಕ್ಟ್ ಮೀಟಿಂಗ್ ಅಂತ ಮಾಡುತ್ತಿದ್ದರು ಎಲ್ಲಾ ಕಡೆಗಳಿಗೂ ಹೋಗಿ ಇವರು ತೊಘಲಕ್ ದರ್‌ಬಾರ್ ತರಹ ನಡೆಸುತ್ತಿದ್ದರು, ಆ ರೀತಿಯ ಒಂದು ಕೆಲಸವನ್ನು ಅವರಿಗೆ ಕೊಟ್ಟಿದ್ದೀರಿ. ಎ.ಸಿ. ಯವರು ಕಾರ್ಮಿಕರ ಈ ಒಂದು ಕಾಂಪನ್‌ಸೇಷನ್ ಬಗ್ಗೆ ತೀರ್ಮಾನ ಮಾಡುವುದನ್ನು ವರ್ಷಾನುಗಟ್ಟಲೆಯಾದರೂ ಮಾಡುತ್ತಿಲ್ಲ ಎನ್ನುವುದನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಈ ಒಂದು ವಿಚಾರದಲ್ಲಿ ತಮಗೆ ನಾನು ಒಂದೆರಡು ಉದಾಹರಣೆಗಳನ್ನು ಕೊಡುತ್ತೇನೆ. ಮಂಗಳೂರಿನಲ್ಲಿ ಒಬ್ಬ ಕಾರ್ಮಿಕ ಸತ್ತು ೬ ವರ್ಷಗಳಾದರೂ ಕೂಡ ಎ.ಸಿ. ಯವರಿಗೆ ಸಂಬಂಧಪಟ್ಟವರು ಅರ್ಜಿ ಕಳುಹಿಸಿ ಕೊಟ್ಟಿದರೂ ಅದಕ್ಕೆ ನಂಬರ್ ಹಚ್ಚಿ ಇಂಥಾ ದಿವಸ ತನಿಖೆ ಮಾಡುತ್ತೇವೆ ಎನ್ನುವ ಬಗ್ಗೆ ನೋಟೀಸ್ ಕೊಟ್ಟಿಲ್ಲ. ಮತ್ತೆ ಇನ್ನೊಂದು ಇನ್ಸ್‌ಸ್ಟೆನ್ಸ್ ತಮಗೆ ಕೊಡುವುದಾದರೆ ಸಿದ್ದಪ್ಪ ಬಿನ್ ಮಲ್ಲಪ್ಪ, ಅವನು ಆರಸೀಕೆರೆಯ ಹತ್ತಿರವಿರುವ ತೆಂಗಿನ ನಾರಿನ ಕಾರ್ಖಾನೆಯಲ್ಲಿ ಕೆಲಸ ಮಾಡುತ್ತಿದ್ದ. ೨೫ನೇ ಜೂನ್ ೧೯೭೬ರಲ್ಲಿ ಆಕ್ಸಿಡೆಂಟ್ ಆಯಿತು. ಆ ಕೆಲಸಗಾರರ ಕೈ ಮೂಳೆ ಮುರಿದಿದೆ ಆ ಕೆಲಸಗಾರನ ಫೋಟೋ ಕೂಡ ನನ್ನ ಹತ್ತಿರವಿದೆ ಆದನ್ನು ತಮ್ಮ ಮುಖಾಂತರ ಮಾನ್ಯ ಸಚಿವರಿಗೆ ಕಳುಹಿಸಿ ಕೊಡುತ್ತೇನೆ. ಇಲ್ಲಿಯವರೆಗೂ ಯಾವ ಕ್ರಮವನ್ನೂ ಕೈಕೊಂಡಿಲ್ಲ. ಇದರ ಬಗ್ಗೆ ಮಾಲೀಕರಿಗೆ ೫–೬ ಪತ್ರಗಳನ್ನು ಬರೆದರೂ ಉತ್ತರವಿಲ್ಲ. ಎ.ಸಿ.ಯವರಿಗೂ ೫–೬ ಪತ್ರಗಳನ್ನು ಬರೆದಿದ್ದೇವೆ ಇಲ್ಲಿಯ

ವರೆಗೂ ಅವರಿಂದ ಉತ್ತರವಿಲ್ಲ. ಏನು ವ್ಯವಹಾರ ನಡೆದಿದೆ ಎನ್ನುವುದು ಇಷ್ಟರತನಕ ಗೊತ್ತಾಗಿಲ್ಲ. ಈಗ ನಾವು ೧೯೭೮ನೇ ಇಸ್ವಿಯಲ್ಲಿದ್ದೇವೆ. ಅದಕ್ಕೆ ತಮಗೆ ನಾನು ಹೇಳುತ್ತಿರುವುದು ನಿಮ್ಮ ಇಲಾಖೆ ನಿದ್ದೆ ಮಾಡುತ್ತಿದೆಂದು. ಆಕ್ಸಿಡೆಂಟ್‌ಗಳನ್ನು ತಪ್ಪಿಸುವಂಥಾ ಮತ್ತು ಆಕ್ಸಿಡೆಂಟ್‌ನಲ್ಲಿ ಮೃತ ಪಟ್ಟವರಿಗೆ ಏನಾದರೂ ಹಣದ ಪರಿಹಾರ ದೊರೆಯುವಂಥಾ ಕೆಲಸ ವರ್ಷಾನುಗಟ್ಟಲೆಯಾದರೂ ತೀರ್ಮಾನವಾಗದೇ ಇರುವುದನ್ನು ತಪ್ಪಿಸಬೇಕಾದರೆ ತಾವು ಎ.ಸಿ.ಯವರಿಗೆ ಕೊಟ್ಟಿರುವ ಅಧಿಕಾರವನ್ನು ತಪ್ಪಿಸಿ ಅದನ್ನು ಬೇಕಾದರೆ ಜ್ಯುಡಿಷಿಯರಿಗೋ ಅಥವಾ ಕ್ಯಾಸಿ ಜ್ಯುಡಿಷಿಯರಿಗೋ ಒಪ್ಪಿಸಿ ಅಥವಾ ಅದಕ್ಕೇ ಒಂದು ಪ್ರತ್ಯೇಕವಾದ ಅಧಿಕಾರಿಯನ್ನು ನೇಮಕ ಮಾಡಿ. ಇಲ್ಲ ಅದನ್ನು ಮುನ್ಸೀಫರ್‌ಗೋ, ಡಿಸ್ಟ್ರಿಕ್ಟ್ ಜಡ್ಜ್‌ಗಳಿಗೋ ವಹಿಸಿ ಅವರು ಅದನ್ನು ಕೂಡಲೇ ತನಿಖೆ ಮಾಡಿ ಬೇಗನೆ ಇತ್ಯರ್ಥ ಮಾಡುವುದಕ್ಕೆ ವ್ಯವಸ್ಥೆ ಮಾಡಬೇಕು ಎನ್ನುವ ಬಗ್ಗೆ ಮೊದಲನೆಯದಾಗಿ ತಮ್ಮಲ್ಲಿ ಕೇಳಿಕೊಳ್ಳುತ್ತೇನೆ. ಇನ್ನೊಂದು ವಿಚಾರ ತಮಗೆ ಹೇಳುವುದಾದರೆ ಬಾಂಡೆಡ್ ಲೇಬರ್‌ಗಳನ್ನು ೧೯೭೬ರಲ್ಲಿ ಬಿಡುಗಡೆ ಮಾಡಿದ್ದೀರಿ ಅದನ್ನು ಜಾರಿಗೆ ಕೊಡುವಂಥಾ ಅಧಿಕಾರವನ್ನು ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟ್‌ರಿಗೆ ಕೊಟ್ಟಿದ್ದೀರಿ. ತುರ್ತು ಪರಿಸ್ಥಿತಿಯ ಕಾಲದಲ್ಲಿ ಅವರನ್ನು ಬಿಡುಗಡೆ ಮಾಡಿದ್ದೀರಿ. ಆದರೆ ಇವತ್ತು ಅವರಿಗೆ ಯಾವ ಭದ್ರತೆ ಇಲ್ಲದೇ ಹೋಗಿದೆ. ಇದರಲ್ಲಿ ತಾವು ಒಂದು ವಿಚಾರವನ್ನು ನಮಗೆ ತಿಳಿಸಬೇಕಾಗಿದೆ. ೧೯೭೭–೭೮ರಲ್ಲಿ ಎಷ್ಟು ಜನ ಬಾಂಡೆಡ್ ಲೇಬರರ್ಸ್‌ನ್ನು ಬಿಡುಗಡೆ ಮಾಡಿದ್ದೀರಿ ಎನ್ನುವ ಲೆಕ್ಕವನ್ನು ಕೊಡಬೇಕಾಗಿದೆ. ಆ ಲೆಕ್ಕವನ್ನು ನಮಗೆ ಕೊಟ್ಟಿಲ್ಲ. ಆದರೆ ೧೯೭೬ರಲ್ಲಿ ತುರ್ತು ಪರಿಸ್ಥಿತಿಯು ಕಾಲದಲ್ಲಿ ಇಷ್ಟಿಷ್ಟು ಜನರನ್ನು ಬಿಡುಗಡೆ ಮಾಡಿದ್ದೇವೆಂದು ಲೆಕ್ಕವನ್ನು ಕೊಟ್ಟಿದ್ದೀರಿ ಆ ನಂತರ ಎಷ್ಟು ಜನರನ್ನು ಬಿಡುಗಡೆ ಮಾಡಿದ್ದೀರಿ ಎನ್ನುವ ಬಗ್ಗೆ ನಮಗೆ ಅಂಕಿಸಂಖೆಗಳು ಸಿಗುತ್ತಿಲ್ಲ. ಇದರ ಕಡೆಗೆ ಯಾರೂ ಗಮನ ಕೊಟ್ಟಿಲ್ಲ ಮತ್ತು ಅದನ್ನು ಜಾರಿಗೆಗೊಳಿಸುವಂಥ ಕ್ರಮವನ್ನು ತೆಗೆದುಕೊಂಡಿಲ್ಲ, ಅಂದರೆ ಇದನ್ನು ಹೇಳುವಾಗ ಯಾರೂ ಪುನಃ ತುರ್ತುಪರಿಸ್ಥಿತಿ ತಂದು ಅದನ್ನು ಜಾರಿಗೆ ಗೊಳಿಸಬೇಕೇ ಎನ್ನುವ ಅರ್ಥದಲ್ಲಿ ನಾನು ಹೇಳುತ್ತಿಲ್ಲ. ಆ ಅರ್ಥವಲ್ಲ. ಈಗ ಎಮರ್‌ಜೆನ್ಸಿ ಅವಶ್ಯಕತೆ ಇಲ್ಲ; ಯಾವುದೇ ಒಂದು ದಬ್ಬಾಳಿಕೆಯ ಕ್ರಮವನ್ನು ಅನುಸರಿಸಬೇಕು ಎಂದೇನೂ ಇಲ್ಲ. ಪ್ರಜಾಪ್ರಭುತ್ವ ಪದ್ಧತಿಯಲ್ಲಿ ನಾಗರೀಕ ಸ್ವತಂತ್ರ ಸಂಪೂರ್ಣವಾಗಿ ಇರತಕ್ಕಂಥ ಹಾದಿಯಲ್ಲಿ ಈ ಜೀತ ಪದ್ಧತಿ ನಮ್ಮ ರಾಷ್ಟ್ರದಲ್ಲಿ ಮತ್ತು ನಮ್ಮ ರಾಜ್ಯದಲ್ಲಿ ಹೋಗಲಾಡಿಸಬೇಕು. ಇದನ್ನು ಹೋಗ ಲಾಡಿಸುವುದಕ್ಕೆ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಯಾವ ಒಂದು ಕ್ರಮವನ್ನು ತೆಗೆದುಕೊಳ್ಳುವುದಕ್ಕೆ ಸಾಧ್ಯವೋ ಆ ಕ್ರಮವನ್ನು ತೆಗೆದುಕೊಳ್ಳುವುದಕ್ಕೆ ಸಾಧ್ಯವಾಗಬೇಕು. ಅದಕ್ಕಾಗಿ ತಾವು ಏನು ವ್ಯವಸ್ಥೆಯನ್ನು ಮಾಡಿದ್ದೀರಿ? ಇನ್ನು ಮುಂದೆ ಏನು ವ್ಯವಸ್ಥೆಯನ್ನು ಮಾಡುತ್ತೀರಿ? ಎನ್ನುವ ಬಗ್ಗೆ ತಾವು ದಯವಾಡಿ ತಿಳಿಸಬೇಕು. ಮಾನ್ಯ ಆರಕೇರಿಯವರು ಹಳ್ಳಿಗಾಡಿನಲ್ಲಿರತಕ್ಕಂಥ ಕೃಷಿ ಕಾರ್ಮಿಕರ ಬಗ್ಗೆ ಬಹಳ ಮುಖ್ಯವಾದಂಥ ವಿಚಾರವನ್ನು ಹೇಳಿದ್ದಾರೆ. ಹಾಗೆಯೇ ನಾನು ಹಳ್ಳಿಗಾಡಿ ನಿಂದ ಬರುದವನಾದ್ದರಿಂದ ಈ ಬಗ್ಗೆ ಒಂದು ವಿಚಾರವನ್ನು ಹೇಳಬಯಸುತ್ತೇನೆ. ಇವತ್ತು ತಾವು ಈ ವ್ಯವಸಾಯ ಕೂಲಿಗಾರರ ಬಗ್ಗೆ ಕಾನೂನು ಪ್ರಕಾರ ಅವರಿಗೆ ಒಂದು ಕನಿಷ್ಟ ವೇತನವನ್ನು ನಿಗಧಿ ಮಾಡಿದ್ದೀರಿ. ನಿಜವಾಗಿಯೂ ಕೂಡ ಈ ಒಂದು ಕನಿಷ್ಟ ವೇತನ ಕೆಲವುಕಡೆಗಳಲ್ಲಿ ಇರುವ ವೇತನ ಕ್ಕಿಂತಲೂ ಕಡಿಮೆ ಇದೆ. ಈ ಕನಿಷ್ಟ ವೇತನವನ್ನು ನಿಗಧಿ ಮಾಡುವಾಗ ಯಾವ ಆಧಾರದಮೇಲೆ ಈ ಕನಿಷ್ಟ ವೇತನವನ್ನು ನಿಗಧಿ ಮಾಡುತ್ತಾರೆ ಎಂಬುದು ತಮಗೆ ಗೊತ್ತಿದೆ. ತಾವು ಅವರಿಗೆ ಕೊಡುತ್ತಿರುವ ವೇತನ ಎರಡು ಹೊತ್ತು ಊಟ ಮಾಡುವುದಕ್ಕೆ ಸಾಕಾಗುತ್ತದೆಯೇ ಹೊರತು ಅವರ ಸಂಸಾರದ ಪೋಷಣೆ ಮಾಡುವುದಕ್ಕೆ, ಅವರ ಆರೋಗ್ಯ ರಕ್ಷಣೆ ಮಾಡಿಕೊಳ್ಳುವುದಕ್ಕೆ ಇದು ಸಾಕಾಗುವುದಿಲ್ಲ. ಈ ವೇತನದಲ್ಲಿ ಅವರು ಜೀವನ ಮಾಡುವುದಕ್ಕೆ ಆಗದೇ ಇರತಕ್ಕಂಥ ಸಂದರ್ಭದಲ್ಲಿ ಅವರ ಮಕ್ಕಳುಗಳು ಮುಂದೆ ಜೆನ್ನಾಗಿ ಬದುಕುವುದಕ್ಕೆ ಅವಕಾಶ ಮಾಡಿಕೊಡಲು ಈ ವೇತನದಿಂದ ಸಾಧ್ಯವಾಗುವುದಿಲ್ಲ. ಆದ್ದರಿಂದ ಇದನ್ನು ಕನಿಷ್ಟ ವೇತನ ಎಂದು ಕರೆಯುವುದಕ್ಕೂ ಸಾಧ್ಯವಿಲ್ಲ. ತಾವು ಇವತ್ತು ಒಂದು ಶಾಸನದ ಆಧಾರದಮೇಲೆ ಈ ಕನಿಷ್ಟ ವೇತನವನ್ನು ನಿಗಧಿ ಮಾಡಿರುವುದು ಬಹಳ ಕಡಿಮೆ ಇದೆ. ಇನ್ನು ಎರಡನೆಯದಾಗಿ ತಾವು ಜಾರಿ ಮಾಡಿರುವ ಕನಿಷ್ಟ ವೇತನ ಎಷ್ಟು ಹಳ್ಳಿಗಳಲ್ಲಿ ಜಾರಿಗೆ ಬರುತ್ತದೆ ಎಂಬುದನ್ನು ತಾವು ಯೋಚನೆ ಮಾಡಿ ಹೇಳಿ. ಇವತ್ತು ತಾವು ಈ ಕನಿಷ್ಟ ವೇತನವನ್ನು ಜಾರಿ ಮಾಡಲು ರೆವಿನ್ಯೂ ಇನ್ಸ್‌ಪೆಕ್ಟರಿಗೆ ಅಧಿಕಾರ ಕೊಟ್ಟಿದ್ದೀರಿ. ರೆವಿನ್ಯೂ ಇನ್ಸ್‌ಪೆಕ್ಟರ್‌ರವರು ಹಳ್ಳಿಗಳಲ್ಲಿ ಕನಿಷ್ಟ ವೇತನವನ್ನು ಜಾರಿ ಮಾಡಿದರೆ ಅದು ಎಷ್ಟರಮಟ್ಟಿಗೆ ಜಾರಿಗೆ ಬರುತ್ತದೆ ಎಂಬುದನ್ನು ತಾವು ನೋಡಬೇಕಾಗಿದೆ. ಇದನ್ನು ರೆವಿನ್ಯೂ ಇನ್ಸ್‌ಪೆಕ್ಟರ್‌ರವರು ಜಾರಿಗೆ ತರಬೇಕು ಎಂದರೆ, ಅವರಿಂದ

ಇದು ಖಂಡಿತವಾಗಿಯೂ ಸಾಧ್ಯವಾಗುವುದಿಲ್ಲ. ಏಕೆಂದರೆ ರೆವಿನ್ಯೂ ಇನ್ಸ್‌ಪೆಕ್ಟರ್‌ರವರಿಗೆ ಜಾಸ್ತಿ ಕೆಲಸ ಇದೆ. ಆ ದೊಡ್ಡ ಕೆಲಸ ಏನೆಂದರೆ ಸರ್ಟಿಫಿಕೇಟ್ ಕೊಡುವುದರಲ್ಲಿ ಹಣ ಹೊಡೆಯುವುದೇ ಆ ದೊಡ್ಡ ಕೆಲಸ ಆದರಲ್ಲಿ ಅವರು ಪ್ರವೀಣರಾಗಿದ್ದಾರೆ. ಹಳ್ಳಿಯಲ್ಲಿ ಅವರು ಕೃಷಿ ಕೂಲಿಗಾರರಿಗೆ ಕನಿಷ್ಟ ವೇತನ ವನ್ನು ಜಾರಿ ಮಾಡುವುದೆಂದರೆ ಆದರಲ್ಲಿ ಹಣವನ್ನು ಹೊಡೆಯುತ್ತಾರೆ. ರೆವಿನ್ಯೂ ಇನ್ಸ್‌ಪೆಕ್ಟರ್‌ಗಿಂದ ಈ ಒಂದು ಕೆಲಸ ಸರಿಯಾದ ರೀತಿಯಲ್ಲಿ, ಕೃಷಿ ಕೂಲಿಗಾರರಿಗೆ ಅನುಕೂಲವಾಗುವಂಥ ರೀತಿಯಲ್ಲಿ ಆಗುವುದಿಲ್ಲ ಆದ್ದರಿಂದ ಈ ಬಗ್ಗೆ ಲೇಬರ್ ಡಿಪಾರ್ಟ್‌ಮೆಂಟ್‌ನಿಂದ ಸರಿಯಾದ ವ್ಯವಸ್ಥೆಯನ್ನು ಮಾಡಬೇಕು. ಇಲ್ಲದಿದ್ದರೆ ಈ ಕಾಯಿದೆಯನ್ನು ಸರಿಯಾದ ರೀತಿಯಲ್ಲಿ ಜಾರಿಗೆ ಕೊಡುವುದಕ್ಕೆ ಸಾಧ್ಯವಾಗುವುದಿಲ್ಲ. ಇನ್ನೊಂದು ಮುಖ್ಯವಾದ ವಿಚಾರವೇನೆಂದರೆ ಕೇರಳದಲ್ಲಿ ಈ ಕೃಷಿ ಕೂಲಿಗಾರರ ಹಿತರಕ್ಷಣೆಯನ್ನು ಮಾಡುವುದಕ್ಕಾಗಿ ಮತ್ತು ಮಾಲೀಕರಿಗೆ ಮತ್ತು ಕೃಷಿ ಕಾರ್ಮಿಕರಿಗೆ ಉಂಟಾದ ವಿವಾದಗಳನ್ನು ಪರಿಹಾರ ಮಾಡುವುದಕ್ಕಾಗಿ ಲೇಬರ್ ಡಿಸ್ಪ್ಯೂಟ್ ಆಕ್ಟ್ ಎಂದು ಒಂದು ಸಣ್ಣ ಕಾಯಿದೆಯನ್ನು ತಂದಿದ್ದಾರೆ. ಇದನ್ನು ಯುನೈಟೆಡ್ ನೇಷನ್ಸ್ ಆರ್ಗನೈಸೇಷನ್‌ರವರು 'ಮಾದರಿ ಕಾನೂನು ಎಂದು ಆ ರೀತಿಯಲ್ಲಿ ಅವರು ಪ್ರಶಂಸೆ ಮಾಡಿದ್ದಾರೆ. ಈ ಕಾನೂನು ಬಂದಮೇಲೆ ಕೇಂದ್ರ ಸರ್ಕಾರದಲ್ಲಿ ಮಾನ್ಯ ರವೀಂದ್ರ ವರ್ಮರವರು ಇದರ ಬಗ್ಗೆ ಎಲ್ಲಾ ರಾಜ್ಯಸರ್ಕಾರಗಳಿಗೆ ಸುತ್ತೋಲೆಯನ್ನು ಕಳಿಸಿ ಇದರ ಬಗ್ಗೆ ನಿಮ್ಮ ಅಭಿಪ್ರಾಯವೇನು? ಈ ಕೃಷಿ ಕಾರ್ಮಿಕರ ರಕ್ಷಣೆಗೋಸ್ಕರ ತಾವು ಯಾವ ಕಾನೂನನ್ನು ಮಾಡ ಬೇಕೆಂದಿದ್ದೀರಿ? ಈ ಬಗ್ಗೆ ತಮ್ಮ ವಿಚಾರವನ್ನು ಕೇಂದ್ರಸರ್ಕಾರಕ್ಕೆ ತಿಳಿಸಬೇಕು ಎಂದು ಕೇಳಿದ್ದಾರೆ. ಮಾನ್ಯ ರವೀಂದ್ರವರ್ಮರವರು ಹೇಳಿರತಕ್ಕಂಥ ಮಾತುಗಳನ್ನು ತಮ್ಮ ಕಾರ್ಮಿಕ ಪತ್ರಿಕೆಯಲ್ಲಿ ನಮ್ಮ ಇಲಾಖೆಯವರು ಮುದ್ರಿಸಿದ್ದಾರೆ. ಅವರು ಎಲ್ಲಾ ರಾಜ್ಯಗಳನ್ನು ಅವರ ಅಭಿಪ್ರಾಯ ಕೇಳಿದಾಗ ಕೆಲವು ರಾಜ್ಯಗಳು ಇಂತಹ ಕಾನೂನು ಮಾಡಬೇಕು ಎಂದು ಸಲಹೆ ಕೊಟ್ಟಿದ್ದಾರೆ. ಇನ್ನು ಕೆಲವು ರಾಜ್ಯಗಳು ಈ ಕಾನೂನು ಇರಬಾರದು ಎಂದು ಸಲಹೆ ಕೊಟ್ಟಿದ್ದಾರೆ. ಇನ್ನು ಕೆಲವು ರಾಜ್ಯಗಳು ಈ ಬಗ್ಗೆ ಕೇರಳ ರಾಜ್ಯವನ್ನು ನಾವು ಮಾದರಿಯಾಗಿ ಇಟ್ಟುಕೊಳ್ಳಬಹುದು ಎಂದು ಸಲಹೆ ಕೊಟ್ಟಿದ್ದಾರೆ. ಆವರು ನಮ್ಮ ರಾಜ್ಯದವರನ್ನೂ ಈ ಬಗ್ಗೆ ಸಲಹೆ ಕೇಳಿದ್ದಾರೆ. ಆದ್ದರಿಂದ ಇದರಲ್ಲಿ ತಾವು ಯಾವ ಪಂಗಡಕ್ಕೆ ಸೇರಿದವರು ಎಂಬುದನ್ನು ತಿಳಿಸಬೇಕು. ಈ ರೀತಿಯ ಕಾನೂನು ಆಗಬೇಕು ಎಂದು ತಾವು ಕೇಂದ್ರಸರ್ಕಾರಕ್ಕೆ ಸಲಹೆ ಕೊಟ್ಟಿದ್ದೀರೋ ಅಥವಾ ಈ ರೀತಿಯ ಕಾನೂನು ಆಗಬಾರದು ಎಂದು ಸಲಹೆ ಕೊಟ್ಟಿದ್ದೀರೋ ಎಂಬುದರ ಬಗ್ಗೆ ತಾವು ದಯಮಾಡಿ ಇಲ್ಲಿ ತಿಳಿಸಬೇಕು. ಇದಕ್ಕೆ ತಾವು ಪ್ರತ್ಯೇಕವಾಗಿ ಉತ್ತರ ಕೊಡಬೇಕು, ಏಕೆಂದರೆ ನಾವು ಇವತ್ತು ವರ್ಗಸಂಘರ್ಷವನ್ನು ಆರಂಭ ಮಾಡಿದ್ದೇವೆ. ಇವತ್ತು ವರ್ಗಸಂಘರ್ಷವನ್ನು ಆರಂಭ ಮಾಡಿದ್ದೇವೆ ಎಂಬುದಾಗಿ ಮಾನ್ಯ ಮುಖ್ಯಮಂತ್ರಿ ಯವರು ಹೇಳಿದ್ದಾರೆ. ಅವರು ವರ್ಗಸಂಘರ್ಷವನ್ನು ಸ್ವಾಗತ ಮಾಡಿದ್ದಾರೆ. ಈ ಒಂದು ವರ್ಗ ಸಂಘರ್ಷದಲ್ಲಿ ತಾವು ಕೃಷಿ ಕಾರ್ಮಿಕರ ಪಕ್ಷವಲ್ಲಿ ನಿಂತು ಅವರಿಗೆ ರಕ್ಷಣೆ ಕೊಡುವಂಥ ಕಾನೂನನ್ನು ಮಾಡಬೇಕೆಂದು ಇದ್ದೀರೋ ಅಥವಾ ಆಡ್ಡಗೋಡೆಯ ಮೇಲೆ ನಿಂತು ಈ ವರ್ಗಸಂಘರ್ಷದಿಂದ ಆಗ ತಕ್ಕಂಥ ಪರಿಣಾಮವನ್ನು ನೋಡಬೇಕೆಂದ್ದೀರೋ ಅಥವಾ ಭೂಮಾಲೀಕರ ಪಕ್ಷ ಸೇರಿ ಕೃಷಿಕಾರ್ಮಿಕರಿಗೆ ಗೊರಕ್ಷಣೆಯ ಅಗತ್ಯವಿಲ್ಲ ಎಂದು ಹೇಳಬೇಕೆಂದಿದ್ದಿರೋ, ಈ ಬಗ್ಗೆ ವಿಚಾರ ತಿಳಿಯತಕ್ಕಂಥಹಕ್ಕು ಈ ಸದನದ ಎಲ್ಲಾ ಮಾನ್ಯಸದಸ್ಯರುಗಳಿಗಿದೆ. ಕೃಷಿ ಕಾರ್ಮಿಕರಿಗೆ ಈ ಬಗ್ಗೆ ವಿಚಾರ ತಿಳಿದುಕೊಳ್ಳತಕ್ಕಂಥ ಹಕ್ಕು ಇದೆ. ಆದ್ದರಿಂದ ತಾವು ಈ ಬಗ್ಗೆ ತಮ್ಮ ಧೋರಣೆ ಏನು ಎಂಬುದನ್ನು ಸ್ಪಷ್ಟಪಡಿಸಬೇಕೆಂದು ತಮ್ಮನ್ನು ಕೇಳಿಕೊಳ್ಳುತ್ತೇನೆ. ಇನ್ನೊಂದು ಬಹುಮುಖ್ಯವಾದ ವಿಚಾರವೇನೆಂದರೆ ತಮ್ಮ ವರದಿಯಲ್ಲಿ ಹೇಳಿರುವುದನ್ನೆಲ್ಲಾ ಕರ್ನಾಟಕ ಕಾರ್ಮಿಕ ಪತ್ರಿಕೆಯಲ್ಲಿ ಎಲ್ಲಾ ವಿಚಾರಗಳನ್ನು ಹೇಳಿದ್ದಾರೆ. ನಮ್ಮ ರಾಜ್ಯದಲ್ಲಿ ಇವತ್ತಿನದಿವಸ ಅನೇಕ ಫ್ಯಾಕ್ಟರಿಗಳನ್ನು ಮುಚ್ಚಿದ್ದಾರೆ. ಕಾರ್ಮಿಕರನ್ನು ಟೆರ್ಮಿನೇಟ್ ಮಾಡುವುದು, ಲೇಆಫ್ ಮಾಡುವುದು ಇದು ರಾಜ್ಯದಲ್ಲಿ ತೀವ್ರವಾಗಿ ನಡೆಯುತ್ತದೆ. ಈ ತರಹ ಬೇರೆ ರಾಜ್ಯಗಳಲ್ಲೂ ಇರಬಹುದು. ಹುಬ್ಬಳ್ಳಿಯ ಮಹದೇವ ಟೆಕ್ಸ್‌ಟೈಲ್ ಮಿಲ್ಲನ್ನು ಮುಚ್ಚಿ ಎಷ್ಟೋ ಸಮಯವಾಯಿತು. ಇದರಿಂದ ೧೫೦೦ ಜನ ಕೆಲಸಗಾರರಿಗೆ ಕೆಲಸ ಇಲ್ಲವಾಗಿದೆ. ಇವತ್ತು ದಾವಣ ಗೆರೆಯ ಶಂಕರ ಟೆಕ್ಸ್‌ಟೈಲ್ ಮಿಲ್ಲನ್ನು ಸಹ ಮುಚ್ಚಿದ್ದಾರೆ. ಬೆಂಗಳೂರಿನಲ್ಲಿರುವಂಥ ವಿರ್‌ಗೋಮಾಲ್ಟ್ ಫ್ಯಾಕ್ಟರಿಯನ್ನೂ ಮುಚ್ಚಿದ್ದಾರೆ. ಬೆಂಗಳೂರಿನಲ್ಲಿರುವ ಸ್ಪಸ್ತಿ ಕ್ಯಾಷ್ಯೂ ಫ್ಯಾಕರಿಯನ್ನೂ ಮುಚ್ಚಿದ್ದಾರೆ. ಅಲ್ಲಿ ಕಾರ್ಮಿಕರಿಗೆ ಕೊಡಬೇಕಾದಂಥ ವೇತನ ಮತ್ತು ಇತರ ಸವಲತ್ತುಗಳನ್ನು ಕೊಟ್ಟಿಲ್ಲ. ಇದಲ್ಲದೇ ಫರ್ನಾಂಡಿಸ್ ಕ್ಯಾಷ್ಯೂ ಫ್ಯಾಕ್ಟರಿಯನ್ನು ತಾತ್ಕಾಲಿಕವಾಗಿ ಮುಚ್ಚಿದ್ದಾರೆ. ಆಮೇಲೆ ಬ್ರೆಡ್ ತಯಾರು ಮಾಡತಕ್ಕಂಥ ಟಿಫಾನಿಸ್ ಫ್ಯಾಕ್ಟರಿಯನ್ನು ಮುಚ್ಚಿದ್ದಾರೆ. ಎಲ್ಲಾ ಕಾರ್ಮಿಕರು ತಮಗೆ

ಪುನಃ ಕೆಲಸ ಕೊಡಬೇಕೆಂದು ಚಳುವಳಿ ನಡೆಸಿ, ಶಾಂತರೀತಿಯಿಂದ ಮೆರವಣಿಗೆ ಹೋಗುತ್ತಿರುವಾಗ ಪೋಲೀಸರು ಆ ಕೆಲಸಗಾರರ ಮೇಲೆ ಅಮಾನುಷ ರೀತಿಯಲ್ಲಿ ಲಾಠಿ ಚಾರ್ಜ್ ಮಾಡಿದ್ದಾರೆ. ಆ ಕಾರ್ಮಿಕರು ಯಾವ ಒಂದು ಹಿಂಸಾಚಾರಕ್ಕೂ ಹೋಗಿಲ್ಲ. ಅಂತಹವರ ಪೋಲೀಸರು ಅಮಾನುಷರೀತಿಯಲ್ಲಿ ವರ್ತಿಸಿದ್ದಾರೆ. ಕಾರ್ಮಿಕರು ಹಿಂಸಾಚಾರ ಮಾಡುವುದಕ್ಕೆ ಅವಕಾಶವನ್ನು ಕೊಡಿ ಎಂದು ನಾನು ಹೇಳುವುದಿಲ್ಲ. ಪೋಲೀಸರು ಅಂತಹ ಪರಿಸ್ಥಿತಿಯಲ್ಲಿ ಕೈಕಟ್ಟಿ ನಿಲ್ಲಬೇಕು ಎಂದೂ ಹೇಳುವುದಿಲ್ಲ. ಆದರೆ ಆ ಕಾರ್ಮಿಕರು ಶಾಂತರೀತಿಯಿಂದ ಮೆರವಣಿಗೆ ಹೋಗುತ್ತಿರುವಾಗ ಅವರಿಗೆ ರಕ್ಷಣೆ ಕೊಡುವುದನ್ನು ಬಿಟ್ಟು ನಿರಾಯುಧರಾದ ಕಾರ್ಮಿಕರ ಮೇಲೆ ಲಾಠಿ ಪ್ರಯೋಗ ಮಾಡಿದ್ದಾರೆ. ನಮ್ಮ ದೇಶದಲ್ಲಿ ಈ ಜನರು ಗೊಂದಲ ಮಾಡುವವರಲ್ಲ. ಅವರು ಏನೇ ಆದರೂ ನೆಲದವರೆಗೂ ಬಗ್ಗುತ್ತಾರೆ, ನೆಲದ ಕೆಳಗೆ ಬಗ್ಗುವುದಕ್ಕೆ ಸಾಧ್ಯವಾಗುವುದಿಲ್ಲ ಎಂದಾಗ ಮೇಲೆ ಎದ್ದುನಿಂತು ತಿರುಗಿ ಭಾರಿಸುತ್ತಾರೆ. ಆದ್ದರಿಂದ ನಮ್ಮ ರಾಜ್ಯದಲ್ಲಿ ಇಂತಹ ಒಂದು ಪರಿಸ್ಥಿತಿ ನಿರ್ಮಾಣವಾಗದ ಹಾಗೆ ನೋಡಿಕೊಳ್ಳಬೇಕೆಂದು ನಾನು ತಮ್ಮಲ್ಲಿ ಪ್ರಾರ್ಥನೆ ಮಾಡುತ್ತೇನೆ.

ಇನ್ನು ಕೆ.ಎಸ್.ಆರ್.ಟಿ.ಸಿ. ಕಾರ್ಮಿಕರ ಬಗ್ಗೆ ಹೇಳಬೇಕೆಂದರೆ ಅವರು ಇವತ್ತಿನದಿವಸ ಕಂಡಿಷನ್ ನಲ್ಲಿರತಕ್ಕಂಥ ಬಸ್‌ಗಳನ್ನು ನಮಗೆ ಒದಗಿಸಿಕೊಡಬೇಕು, ಕಂಡಿಶನ್‌ನಲ್ಲಿ ಇಲ್ಲದ ಬಸ್‌ಗಳನ್ನು ಓಡಿಸುವುದಕ್ಕೆ ಯಾವ ನಿರ್ಬಂದವನ್ನೂ ಮಾಡಕೂಡದು ಎಂಬುದಾಗಿ ತಮ್ಮ ಬೇಡಿಕೆಯನ್ನು ಮುಂದಿಟ್ಟಿದ್ದಾರೆ. ಅದು ಎಲ್ಲರೂ ಒಪ್ಪತಕ್ಕಂಥ ವಿಚಾರ. ಆದರೆ ಜನರಲ್ ಮ್ಯಾನೇಜರ್‌ರವರ ಒತ್ತಾಯದಿಂದ ಕಂಡಿಷನ್‌ನಲ್ಲಿ ಇಲ್ಲದೇ ಇರತಕ್ಕಂಥ ಬಸ್ಸನ್ನು ಓಡಿಸುತ್ತಿರುವಾಗ ಗ್ಯಾರೇಜ್‌ನಿಂದ ಒಂದು ಫರ್ಲಾಂಗ್ ಹೋಗುವುದರೊಳಗೆ ಒಂದು ಬಸ್ ಮುರಿದು ಬಿದ್ದಿದೆ. ಇವತ್ತಿನದಿವಸ ಕಂಡಿಷನ್‌ನಲ್ಲಿ ಇಲ್ಲದೇ ಇರತಕ್ಕಂಥ ಬಸ್ಸನ್ನು ಓಡಿಸಬೇಕೆಂದು ಒತ್ತಾಯ ಮಾಡಿದಂಥ ಜನರಲ್ ಮ್ಯಾನೇಜರ್ ಮೇಲೆ ತಾವು ಯಾವುದೇ ಕ್ರಮವನ್ನು ತೆಗೆದುಕೊಳ್ಳದೇ ಅಂತಹ ಬಸ್ಸ್‌ನ್ನು ಓಡಿಸಿದಂಥ ಡ್ರೈವರ್ ಮತ್ತು ಕಂಡಕ್ಟರ್ ಮೇಲೆ ತಾವು ಕ್ರಮವನ್ನು ತೆಗೆದುಕೊಳ್ಳುತ್ತಿದ್ದೀರಿ. ಇದು ಸರಿಯಲ್ಲ. ಆಮೇಲೆ ಕೆಟ್ಟು ಹೋದ ಬಸ್‌ಗಳನ್ನು ರಿಪೇರಿಗಾಗಿ ಗ್ಯಾರೇಜ್‌ನಲ್ಲಿ ಇಟ್ಟರೆ ಕೆಲವರು ಅದರ ಸ್ಪೇರ್ ಪಾರ್ಟ್ಸ್‌ಗಳನ್ನು ಕದ್ದು ಮಾರಾಟ ಮಾಡುತ್ತಾರೆ, ಅಂತಹವರ ಮೇಲೆ ತಾವು ಕ್ರಮ ತೆಗೆದುಕೊಳ್ಳುವುದಿಲ್ಲ. ಇನ್ನೊಂದು ವಿಚಾರವೇನೆಂದರೆ ಅಲ್ಲಿರತಕ್ಕಂಥ ಡ್ರೈವರ್‌ಗಳಿಗೆ ತಾವು ನಡೆಸತಕ್ಕಂಥ ಬಸ್‌ಗಳನ್ನು ಆಕ್ಸಿಡೆಂಟ್ ಮಾಡಿ ಬಸ್‌ಗಳನ್ನು ಮುರಿದು ಹಾಕಬೇಕು, ಅದರ ಜೊತೆಗೆ ತಾವೂ ಸಾಯಬೇಕು ಎನ್ನತಕ್ಕಂಥ ಮನೋಭಾವ ಯಾರಿಗೂ ಇರುವುದಿಲ್ಲ. ಅವರು ಅದಷ್ಟೂ ಜಾಗ್ರತೆಯಿಂದಲೇ ಬಸ್‌ಗಳನ್ನು ನಡೆಸುತ್ತಾರೆ. ಆದರೆ ದುರ್ದೈವವಶಾತ್ ಆಕ್ಸಿಡೆಂಟ್‌ಗಳು ನಡೆಯುತ್ತವೆ. ಅದಕ್ಕೆ ಯಾರೇನೂ ಮಾಡುವುಕ್ಕಾಗುವುದಿಲ್ಲ. ನಿನ್ನೆ ನಡೆದಂಥ ಬಸ್ ಆಕ್ಸಿಡೆಂಟ್‌ನಲ್ಲಿ ಡ್ರೈವರ್‌ಗೆ ವಿಪರೀತ ಏಟು ಬಿದ್ದು ಅವನ ಪಕ್ಕೆಲಬು ಮುರಿದಿದೆ ಬಸ್ಸನ್ನು ಆಕ್ಸಿಡೆಂಟ್ ಮಾಡಿಸಿ ೩ ಜನರನ್ನು ಕೊಲ್ಲಬೇಕು ಎಂದು ಅವನಿಗೆ ಆಶೆ ಇರಲಿಲ್ಲ. ದುರಾದೃಷ್ಟವಶಾತ್ ಆಕ್ಸಿಡೆಂಟ್ ಆಗಿದೆ. ಕಂಡಿಷನ್‌ನಲ್ಲಿರತಕ್ಕಂಥ ಬಸ್‌ಗಳನ್ನು ಅವರಿಗೆ ಒದಗಿಸಿದರೆ ಈ ತರಹ ಆಕ್ಸಿಡೆಂಟ್ ಆಗತಕ್ಕಂಥಾದ್ದನ್ನು ತಪ್ಪಿಸ ಬಹುದಕ್ಕೆ ಸಾಧ್ಯವಿದೆ. ಆದ್ದರಿಂದ ಅವರಿಗೆ ಬೇಕಾದಂಥ ಅನುಕೂಲತೆಗಳನ್ನು, ಸವಲತ್ತುಗಳನ್ನು ಒದಗಿಸಿಕೊಡುವುದಕ್ಕೆ ಆಡಳಿತವನ್ನು ಒತ್ತಾಯಮಾಡಲು ಲೇಬರ್ ಇಲಾಖೆಯವರು ಪ್ರಯತ್ನ ಮಾಡಬೇಕು. ಮತ್ತು ಕಾರ್ಮಿಕರ ವಿರುದ್ಧವಾಗಿ ವ್ಯವಹರಿಸತಕ್ಕಂಥ ಮ್ಯಾನೇಜ್‌ಮೆಂಟ್‌ಗಳ ಮೇಲೆ ಕಾರ್ಮಿಕ ಇಲಾಖೆ ಬಲವಾದ ಹಿಡಿತವನ್ನು ಇಟ್ಟುಕೊಳ್ಳಬೇಕು ಎಂದು ಹೇಳಬಯಸುತ್ತೇನೆ.

೬-೩೦ ಪಿ.ಎಂ.

ಇದು ಬಹಳ ಮುಖ್ಯವಾದ ಬೇಡಿಕೆಯಾಗಿರುವುದರಿಂದ ನನಗೆ ಹೆಚ್ಚು ಕಾಲಾವಕಾಶವನ್ನು ಕೊಡಬೇಕು. ಅನಾವಶ್ಯಕವಾದ ಮಾತನ್ನು ನಾನು ಹೇಳುವುದಿಲ್ಲ. ಬಹುಮುಖ್ಯವಾದ ಬೇಡಿಕೆಯಾಗಿರುವುದರಿಂದ ಹಲವಾರು ವಿಚಾರವನ್ನು ಹೇಳಬೇಕಾಗಿದೆ. ಸ್ವಲ್ಪ ಕಾಲಾವಕಾಶ ಕೊಡಬೇಕು. ಹೆಚ್ಚು ಸಮಯ ತೆಗೆದುಕೊಳ್ಳುವುದಿಲ್ಲ. ಆದ್ದರಿಂದ ಇಂತಹ ಇಲಾಖೆಗಳ ಬಗ್ಗೆ ಎಚ್ಚರಿಕೆ ವಹಿಸಬೇಕೆಂದು ಹೇಳುತ್ತೇನೆ. ಇವತ್ತು ಕಾರ್ಮಿಕರು ಸರ್ಕಾರದಲ್ಲಿರುವ ಇಲಾಖೆಗಳಲ್ಲಿ ಮಾಮೂಲಿಯ ಮಾಡಬಾರದು ಎನ್ನುವ ಅಭಿಲಾಶೆಯನ್ನು ಇಟ್ಟುಕೊಂಡಿದ್ದಾರೆ. ಬೆಂಗಳೂರು ಜಲಮಂಡಲಿ ಎಂಬ ಒಂದು ಸಂಸ್ಥೆ ಇದೆ. ಅದರಲ್ಲಿ ಕೆಲಸ ಮಾಡುವ ನೌಕರರು ಬೆಂಗಳೂರು ನಾಗರೀಕರಿಗೆ ನೀರು ಕೊಡಬಾರದು ಎನ್ನುವ ಇಚ್ಛೆ ಅವರಿಗೆ ಏನೂ ಇಲ್ಲ. ಆದರೆ ಅಲ್ಲಿ ಕೆಲಸ ಮಾಡುತ್ತಿರುವ ನೌಕರರಿಗೆ ಅನ್ಯಾಯವಾದರೆ ಅದನ್ನು

ತಪ್ಪು ಮುಂದೆ ತೆಗೆದುಕೊಂಡು ಬಂದರೆ ತಾವು ಅದಕೆ ಗಮನ ಕೊಡುವುದಿಲ್ಲ. ಒಂದು ವೇಳೆ ಕನ್ಸಿಲಿಯೇಷನ್ ನಡೆಸಿದರೆ ಸಂಬಂಧಪಟ್ಟ ಅಧಿಕಾರಿಗಳು ನಿಮ್ಮ ಕನ್ಸಿಲಿಯೇಶನ್ ಅಧಿಕಾರಿಗಳ ಮುಂದೆ ಬರುವುದಿಲ್ಲ. ಇವತ್ತು ಆ ಕೆಲಸಗಾರರು ಬೀದಿ ಬಿಕಾರಿಗಳಾಗಿದ್ದಾರೆ. ಕಾರ್ಮಿಕ ವರ್ಗದವರು ಸಂಗ್ರಹಣೆ ಮಾಡಿ ಅವರನ್ನು ಪೋಷಣೆ ಮಾಡುತ್ತಿದ್ದಾರೆ. ಇವತ್ತು ಸುಪ್ರೀಂ ಕೋರ್ಟ್ ವಾಟರ್ ಸಪ್ಲೈ ಅಂಡ್ ಸಿವಿರೇಜ್ ಬೋರ್ಡ್ ಒಂದು ಇಂಡಸ್ಟ್ರೀಸ್ ಎಂಬುದಾಗಿ ಹೇಳಿದ್ದಾರೆ. ಆದ್ದರಿಂದ ಇಂಡಸ್ಟ್ರೀಸ್ ಡಿಸ್‌ಪ್ಯೂಟ್ಸ್‌ನ ಬಗ್ಗೆ ಕ್ರಮ ತೆಗೆದುಕೊಳ್ಳಬೇಕೆಂದು ಹೇಳಿದರೂ ತಮ್ಮ ಇಲಾಖೆಯವರು ಇಂತಹ ಸಂದರ್ಭದಲ್ಲಿ ವ್ಯವಹರಿಸುವುದಿಲ್ಲ. ಮಂಗಳೂರಿನಲ್ಲಿ ಗ್ಯಾಂಗ್‌ಮೆನ್ ಕೆಲಸಗಾರರ ಮತ್ತು ಲೋಕೋಪಯೋಗಿ ಇಲಾಖೆಯ ನಡುವೆ ವಿವಾದ ಇದೆ. ಪಿ.ಡಬ್ಲ್ಯೂ.ಡಿ. ಇಲಾಖೆಯವರು ತಮ್ಮ ವಾದವನ್ನು ಕಳುಹಿಸಬೇಕೆಂದು ಲೇಬರ್ ಕೋರ್ಟ್‌ನವರು ಆದೇಶ ಕೊಟ್ಟಿದ್ದರೂ ಆ ಕೋರ್ಟಿನ ಮುಂದೆ ವಾದ ಹಾಜರು ಮಾಡುವುದಿಲ್ಲ. ಮತ್ತೆ ಕಂಪ್ಲಿಂಟ್ ಪೈಲ್ ಮಾಡುವುದಕ್ಕೂ ವರ್ಷಗಟ್ಟಲೆ ತೆಗೆದುಕೊಂಡು ಕಾಲ ಕಳೆಯುತ್ತಾರೆ. ಇಂತಾದ್ದಕ್ಕೆ ಏಕೆ ಅವಕಾಶ ಕೊಡಬೇಕು ? ಮುನಿಸಿಪಲ್ ಇಲಾಖೆಯಲ್ಲಿ ಕೆಲಸ ಮಾಡುತ್ತಿರುವ ಪೌರ ಕಾರ್ಮಿಕನ ಬಗ್ಗೆ ವಿವಾದ ಬರುತ್ತದೆ. ಆ ವಿವಾದವನ್ನು ತೀರ್ಮಾನಮಾಡುವುದಕ್ಕೆ ಲೇಬರ್ ಕಮೀಷನರ್ ಮುಂದೆ ಮುನ್ಸಿಪಲ್ ಅಧಿಕಾರಿಗಳು ಬರುವುದಿಲ್ಲ. ಯಾರನ್ನೂ ಕಳುಹಿಸುವುದಿಲ್ಲ. ಕೌಂಟರ್ ಫೈಲ್ ಮಾಡುವುದಿಲ್ಲ. ಲೇಬರ್ ಕೋರ್ಟ್‌ನಲ್ಲಿ ಕನ್ಸಿಲಿಯೇಷನ್ ಪ್ರೊಸೀಡಿಂಗ್ಸ್‌ನ್ನು ನಡೆಸುವ ಅಧಿಕಾರಿಗಳ ಬಗ್ಗೆ ಬಹಳ ಹೀನಾಯವಾದ ಭಾವನೆಯನ್ನು ತುಚ್ಛ ಭಾವನೆಯನ್ನು ಈ ಅಧಿಕಾರಿಗಳು ಇಟ್ಟುಕೊಂಡಿರುತ್ತಾರೆ. ಬೇರೆ ಇಲಾಖೆಯ ಅಧಿಕಾರಿಗಳೂ ಇಟ್ಟುಕೊಂಡಿದ್ದಾರೆ. ಈ ದುಸ್ಥಿತಿ ಇವತ್ತು ಇದೆ. ಕಾರ್ಮಿಕನು ಮುಷ್ಕರ ಮಾಡದೆ ಬೇರೆ ದಾರಿಯೇ ಇಲ್ಲ ಎನ್ನುವಂತಹ ಸ್ಥಿತಿಗೆ ಆತನನ್ನು ದೂಡುತ್ತಿದ್ದೀರಿ, ಇದನ್ನು ತಪ್ಪಿಸಬೇಕು

ಕಾರ್ಖಾನೆಗಳನ್ನು ಮುಚ್ಚುತ್ತಾರೆ. ಕಾರ್ಖಾನೆಗಳನ್ನು ನಡೆಸಬೇಕೆಂದು ಸರ್ಕಾರದಿಂದ ದುಡ್ಡು ಕೊಡುತ್ತೀರಿ. ಬ್ಯಾಂಕಿನಿಂದ ಹಣ ಕೊಡುತ್ತಾರೆ. ಆ ಹಣವನ್ನೆಲ್ಲಾ ಅಲ್ಲಿಯ ಮಾಲೀಕರು ತಿಂದು ಹಾಕಿ ಅಲ್ಲಿ ಕೆಲಸ ಮಾಡುತ್ತಿರತಕ್ಕಂಥ ಕೆಲಸಗಾರರಿಗೆ ಕೂಲಿಯನ್ನು ಕೊಡುವುದಿಲ್ಲ. ಎಂ.ಇ.ಐ. ಫ್ಯಾಕ್ಟರಿಯನ್ನು ಸುಮಾರು ಮೂರು ತಿಂಗಳಿಂದ ಮುಚ್ಚಿದ್ದಾರೆ ೩ ತಿಂಗಳಲ್ಲಿ ಸಂಬಳ ಇಲ್ಲ. ಕಾನೂನು ಪ್ರಕಾರವಾಗಿ ಬೋನಸ್ ಕೊಡುವುದಕ್ಕೆ ಪ್ರಾವಿಜನ್ ಇದ್ದರೂ ಅದನ್ನು ಕೊಡದೆ ಕಾರ್ಖಾನೆಯನ್ನು ಮುಚ್ಚಿದ್ದಾರೆ. ಇಂತಹವರ ಮೇಲೆ ಏತಕ್ಕೆ ಕ್ರಮ ತೆಗೆದುಕೊಳ್ಳುವುದೀ ? ತಮ್ಮ ಇಲಾಖೆಯಲ್ಲಿ ವಿಕ್ಟಿಮೈಸೇಶನ್ನಿಗೆ ತಡೆಯೆ ಇಲ್ಲ. ಸ್ಟೈಕ್ ಮಾತ್ರ ಮಾಡಬಾರದು ಎನ್ನುತ್ತೀರಿ ಕೆಲಸಗಾರನನ್ನು ವಾಪಸ್ಸು ಒಂದು ಕಡೆ ನಿಮ್ಮ ಆಸಿಸ್ಟೆಂಟ್ ಲೇಬರ್ ಕಮೀಷನರ್ ಮುಂದೆ ಕನ್ಸಿಲಿಯೇಸನ್ ಆಯಿತು, ಅಗ್ರಿಮೆಂಟ್ ಆಯಿತು. ಟರ್ಮಿನೇಟ್ ಆಗಿದ್ದವರನ್ನು ಕೆಲಸಕ್ಕೆ ವಾಪಸ್ಸು ತೆಗೆದುಕೊಳ್ಳಬೇಕೆಂದು ಒಪ್ಪಿಕೊಂಡರು. ಒಪ್ಪಂದದಂತೆ ನಡೆಯಲಿಲ್ಲ ಈ ರೀತಿಯಾಗಿ ಕ್ರಮಕ್ಕೆ ವಿರುದ್ಧವಾದ ಕ್ರಮವನ್ನು ಅನುಸರಿಸುತ್ತಿದ್ದಾರೆ. ಅದೇ ರೀತಿ ಒಬ್ಬರು ಪ್ರಜಾಮತದಲ್ಲಿ ಕೆಲಸ ಮಾಡುತ್ತಿದ್ದವರನ್ನು ಟರ್ಮಿನೇಟ್ ಮಾಡಿದರು. ಅವರು ನಿಮ್ಮ ಹತ್ತಿರ ಬಂದಾಗ ಏಕೆ ಕನ್ಸಿಲಿಯೇಷನ್ ಮಾಡಬಾರದು ? ಅಥವಾ ಕನ್ಸಿಲಿಯೇಷನ್ ವಿಫಲವಾದರೆ ಯಾಕೆ ರೆಫರ್ ಮಾಡಬಾರದು? ಅದು ಮುಂದೆ ಕೋರ್ಟಿಗೆ ಹೋಗುತ್ತದೆ. ಅಲ್ಲಿ ಅನ್ಯಾಯವಾಗಿದೆ ಎಂಬುದನ್ನು ರುಜುವಾತು ಮಾಡುತ್ತಾರೆ. ಕನ್ಸಿಲಿಯೇಷನ್ ರಿಪೋರ್ಟ್ ಬಂದ ಮೇಲೆ ಅಲ್ಲಿ ಸರಿಯಾದ ರೀತಿಯಲ್ಲಿ ತನಿಖೆ ನಡೆಯುತ್ತದೆ. ಅದು ಸರಿಯೇ ? ತಪ್ಪೇ ಎಂಬುದನ್ನು ತೀರ್ಮಾನ ಮಾಡಬೇಕಾಗಿರುವುದು ಕೋರ್ಟ್. ಇಂಡಸ್ಟ್ರೀಯಲ್ ಟ್ರಿಬ್ಯೂನಲ್, ಲೇಬರ್ ಕೋರ್ಟ್. ತಪ್ಪು ಅಧಿಕಾರಿಗಳು ಕೂತು ಕೊಂಡು ರೆಫರ್ ಮಾಡುವುದಕ್ಕೆ ಸಾಧ್ಯವಿಲ್ಲ ಎಂದು ಹೇಳಲಿಕ್ಕೆ ಅವರಿಗೆ ಅಧಿಕಾರವಿಲ್ಲ. ಪ್ರೈಮಾಪೇಸಿ ಕೇಸ್ ಇಲ್ಲದ್ದರಿಂದ ರೆಫರ್ ಮಾಡುವುದಿಲ್ಲ. ಎಂದು ಹೇಳಲಿಕ್ಕೆ ನಿಮಗೆ ಅಧಿಕಾರವಿಲ್ಲ ಕೆಲಸಕ್ಕೆ ಹಾಜರಾಗದ್ದಕ್ಕೆ ದಾಖಲೆ ಕೊಟ್ಟರೂ ಹಾಜರು ಇರಲಿಲ್ಲ ಎಂದು ಸುಳ್ಳು ವರದಿಯನ್ನು ನಿಮಗೆ ಕಳುಹಿಸುತ್ತಾರೆ. ಒಬ್ಬ ಲೇಬರ್ ಆಫೀಸರ್. ಆ ವರದಿಯ ಆಧಾರದ ಮೇಲೆ ಆ ತೀಸನ್ನು ಮುಂದೆ ರೆಫರ್ ಮಾಡದೆ ರದ್ದು ಮಾಡುತ್ತೀರಿ ಇದರಿಂದ ಕೆಲಸಗಾರರಿಗೆ ಅನ್ಯಾಯವಾಗುತ್ತಿದೆ. ಯಾವುದೇ ಕೇಸ್‌ನಲ್ಲಿ ಸಾಮಾಜಿಕ ನ್ಯಾಯವನ್ನು ಪಡೆಯಲು. ಪ್ರತಿಯೊಬ್ಬ ಮನುಷ್ಯನಿಗೂ ಇದೆ. ಆ ರೀತಿಯ ನ್ಯಾಯ ಸಿಗಬೇಕಾದರೆ ಕನ್ಸಿಲಿಯೇಷನ್ ಫೈಲ್ ತಮ್ಮ ಮುಂದೆ ಬಂದರೆ ಅದನ್ನು ರಿಜೆಕ್ಟ್ ಮಾಡದೆ ಕೋರ್ಟಿಗೆ ಕಳುಹಿಸಿ. ನ್ಯಾಯಾಲಯದಲ್ಲಿ ತನಿಖೆ ಮಾಡುತ್ತಾರೆ ಅಲ್ಲಿ ನಿರ್ದಿಷ್ಟವಾದಂತಹ ತೀರ್ಮಾನವನ್ನು ಅವರು ಕೊಡುತ್ತಾರೆ. ರೆಫರ್ ಆದಮೇಲೂ ಬಹಳಷ್ಟು ತಡವಾಗುತ್ತಿದೆ

ಬೆಂಗಳೂರಿನಲ್ಲಿ ಎಮರ್ಜೆನ್ಸಿ ಇದ್ದಂತಹ ಕಾಲದಲ್ಲಿ ಕೋರ್ಟ್‌ಗಳೂ ಇರಲಿಲ್ಲ. ನ್ಯಾಯಾಧೀಶರು ಇರಲಿಲ್ಲ ಈಗ ಎಮರ್ಜೆನ್ಸಿಯನ್ನು ಇಲ್ಲ. ಆದ್ದರಿಂದ ಕೋರ್ಟ್ ಬೇಕು, ನ್ಯಾಯಾಧೀಶರೂ ಬೇಕು ಆ ರೀತಿಯಾಗಿ ಎಮರ್ಜೆನ್ಸಿ ತೆಗೆದುಹಾಕಿದ ಮೇಲೆ ೨ ತಿಂಗಳಿಂದ ತಿರುಗಿ ಕೋರ್ಟ್‌ಗೆ ಒಬ್ಬರು ಅಧಿಕಾರಿಯನ್ನು ಹಾಕಿದ್ದೀರಿ. ಅವರಿಗೆ ಇರಲಿಕ್ಕೆ ಮನೆ ಇಲ್ಲದೆ ಕಾರಿನ ಶೆಡ್ಡಿನಲ್ಲಿ ಮನೆ ಮಾಡಿಕೊಂಡು ಇವತ್ತು ಕಾಲ ಕಳೆಯುತ್ತಿದ್ದಾರೆ. ಅವರ ಸಂಸಾರ ಮಂಗಳೂರಿನಲ್ಲಿದೆ. ಕಾರಿನ ಶೆಡ್ಡಿನಲ್ಲಿ ಸ್ಕ್ರೀನ್ ಹಾಕಿಕೊಂಡು ಮನೆಮಾಡಿಕೊಂಡು ಕುಳಿತಿದ್ದಾರೆ. ಅವರಿಗೆ ಮನೆಯನ್ನು ಒದಗಿಸಿಕೊಡುವುದಕ್ಕೆ ಸರ್ಕಾರದವರಲ್ಲಿ ಹಣ ಇಲ್ಲವೇ ? ಅವರು ನ್ಯಾಯಾಧೀಶರು. ಜಿಲ್ಲಾ ನ್ಯಾಯಾಧೀಶರ ಸ್ಥಾನದಲ್ಲಿರುವವರು, ಅವರಿಗೆ ಸರಿಯಾದಂತಹ ಮನೆಯನ್ನು ವ್ಯವಸ್ಥೆ ಮಾಡುವುದಕ್ಕೆ ನಿಮಗೆ ಆಗುವುದಿಲ್ಲ ? ಬೆಂಗಳೂರಿನಲ್ಲೆ ಈ ರೀತಿ ಯಾದರೆ ಇನ್ನು ನಮ್ಮ ಹಳ್ಳಿಗಾಡಿನಲ್ಲಿ, ಚಿಕ್ಕ ಮಗಳೂರು, ಶಿವಮೊಗ್ಗ ದಲ್ಲಿರತಕ್ಕಂಥ ಕೋರ್ಟ್‌ನಲ್ಲಿ ಅಧ್ಯಕ್ಷರಾಗಿರತಕ್ಕಂಥವರ ಸ್ಥಿತಿ ಯಾವ ರೀತಿ ಇದೆ ಎಂಬುದನ್ನು ಸ್ವಲ್ಪ ತಾವು ಯೋಚನೆ ಮಾಡಬೇಕು. ಆದ್ದರಿಂದ ನಾನು ಮಾನ್ಯ ಮಂತ್ರಿಗಳಿಗೆ ಸಲಹೆಯನ್ನು ಕೊಡುವುದೇನೆಂದರೆ, ಆಡಳಿತ ಸಂಧಾರಣೆಯಾಗುವುದಕ್ಕೆ ತಾವು ಸಂಪೂರ್ಣವಾಗಿ ಈ ವಿಚಾರ ಧೋರಣೆಯನ್ನು ಬದಲಾವಣೆ ಮಾಡಬೇಕು. ಇವತ್ತು ಕೋ ಆಪರೇಟೀವ್ ಸೊಸೈಟೀಸ್‌ಗಳಲ್ಲಿ ರತಕ್ಕಂಥ ನೌಕರರಿಗೆ ಇಂಡಸ್ಟ್ರಿಯಲ್ ಡಿಸ್‌ಪ್ಯುಟ್ಸ್ ಆಕ್ಟ್ ಅಪ್ಲೈ ಆಗುತ್ತದೆಂದು ಸುಪ್ರೀಂ ಕೋರ್ಟ್ ತೀರ್ಪು ಕೊಟ್ಟಿದೆ. ಆದರೆ ತಮ್ಮ ಆಕ್ಟನ್ನು ಬದಲಾವಣೆ ಮಾಡುವುದಕ್ಕೆ ತಯಾರಾಗಿಲ್ಲ. ತಮ್ಮ ಇಲಾಖೆಯಿಂದ ರಕ್ಷಣೆ ಮಾಡುವುದಕ್ಕೆ ತಯಾರಾಗಿಲ್ಲ. ಇದನ್ನೆಲ್ಲಾ ತಾವು ಯೋಚನೆ ಮಾಡಬೇಕು.ಕೊನೆಯದಾಗಿ ಹೇಳುವುದಾದರೆ, ಕೇಂದ್ರದ ಕಾರ್ಮಿಕ ಧೋರಣೆ ಅಪಾಯಕಾರಿಯಾಗಿ ಬದಲಾವಣೆಯಾಗುವಂತ ಕಾಲದಲ್ಲಿ ನಾವು ಇದ್ದೇವೆ. ಒಂದುಕಡೆ ಜನರು ಹೆಚ್ಚಿನ ಸಂಕಷ್ಟಗಳಿಗೆ ಗುರಿಯಾಗುತ್ತಿರುವಾಗ ಅವನ್ನು ಪರಿಹರಿಸದೆ ಕೈಗಾರಿಕೆ ರಂಗದಲ್ಲಿ ಕಾರ್ಮಿಕರಿಗೆ ಆ ಸಂತೋಷ ಮತ್ತು ಅನ್ಯಾಯವಾಗುವಂಥ ಧ್ಯೇಯ ಧೋರಣೆಗಳು ಇವತ್ತು ಕೇಂದ್ರದಲ್ಲಿ ತಯಾರಾಗುತ್ತಿವೆ. ಶ್ರೀಮಾನ್ ಭೂತಲಿಂಗಮ್ ಕಮಿಟಿಯವರ ವರದಿ ತಮ್ಮ ಮಂದೆ ಬರಬಹುದು. ೧೦೦ ರೂಪಾಯಿ ಕನಿಷ್ಠ ವೇತನದಿಂದ ಆರಂಭಿಸಿ ಏಳು ವರ್ಷಗಳಲ್ಲಿ ೧೫೦ ರೂಪಾಯಿಯವರೆಗೆ ಏರಿಸಿದರೆ ಸಾಕು ಎಂಬುದಾಗಿ ಸುಮಾರು ಒಂದೂವರೆ ಲಕ್ಷ ಸಂಬಳವನ್ನು ತೆಗೆದುಕೊಂಡು ಜೊತೆಗೆ ಇತರೇ ಸವಲತ್ತನ್ನು ಪಡೆಯುತ್ತಿರುವ ಅಧಿಕಾರಿ ಕೊಟ್ಟಿರುವ ವರದಿಯನ್ನು ಆಧಾರವಾಗಿಟ್ಟುಕೊಂಡು ಕಾರ್ಮಿಕರಿಗೆ ರಾಷ್ಟ್ರೀಯ ಕನಿಷ್ಠ ವೇತನ ಕೊಡುವ ನಿರ್ಣಯವನ್ನು ಮಾಡುವ ಮಟ್ಟಕ್ಕೆ ಕೇಂದ್ರ ಸರ್ಕಾರದವರು ಬಂದಿದ್ದಾರೆ. ಕಾರ್ಮಿಕರಿಗೆ ಬೋನಸ್ ಕೊಡಬೇಕೆಂಬ ತತ್ವವನ್ನು ಗಾಳಿಗೆ ಬಿಸಾಕಿದ್ದಾರೆ. ಕಾರ್ಮಿಕರಿಗೆ ಬಾಕಿ ಮಾಡಿದ ವೇತನವೆಂಬ ನೆಲೆಯಲ್ಲಿ ಇವತ್ತು ಬೋನಸ್ ಕೊಡಬೇಕಾಗಿಲ್ಲ. ಏನೋ ಸ್ವಲ್ಪ ಹಣವನ್ನು ಪೆನ್‌ಶನ್‌ನಲ್ಲಿ ಸೇರಿಸಿ ಕೊಟ್ಟುಬಿಡಿ. ಎಂಬುದಾಗಿ ಶ್ರೀಭೂತಲಿಂಗಂ ವರದಿಯಲ್ಲಿ ಸೂಚಿಸಿದೆ. ಅದು ನಿವೃತ್ತಿ ಹೊಂದಿದ ನಂತರ ನಶ್ಯ ಹಾಕಲೂ ಸಾಲದು. ಇನ್ನೊಂದು ವಿಚಾರ ಎಂದರೆ ಕೇಂದ್ರ ಸರಕಾರ ತರಲಿರುವುದಾಗಿ ಪ್ರಕಟವಾಗಿರುವ ಹೊಸ ಕೈಗಾರಿಕಾ ಸಂಬಂಧಗಳ ಮಸೂದೆ. ಸಾಮೂಹಿಕ ವ್ಯವಹಾರಕ್ಕೆ ಚ್ಯುತಿ ತರುವಂಥ. ಸಂಘಟನಾ ಸ್ವಾತಂತ್ರ್ಯ ಮೊಟಕು ಮಾಡುವಂಥ. ಮುಷ್ಕರದ ಹಕ್ಕು ನಿಷೇಧಿಸುವಂಥ. ಪೇಡ್ ಯೂನಿಯನ್‌ಗಳ ನಿತ್ಯದ ನಡವಳಿಕೆಯಲ್ಲೂ ಸರಕಾರ ಕೈ ಹಾಕಲು ಅವಕಾಶ ನೀಡುವಂಥ ಈ ಮಸೂದೆಯನ್ನು ಕಾರ್ಮಿಕ ವರ್ಗ ಒಕ್ಕೂರಲಿನಿಂದ ತಿರಸ್ಕರಿಸುತ್ತದೆ. ಈ ಕಾರ್ಮಿಕ ವಿರೋಧೀ ಮಾರ್ಗವನ್ನು ಕಾರ್ಮಿಕರ ಸರ್ವ ಶಕ್ತಿಯಿಂದ ವಿರೋಧಿಸುತ್ತಾರೆಂದು ಹೇಳಿ ನನ್ನ ಮಾತು ಮುಗಿಸುತ್ತೇನೆ.

ಶ್ರೀ ಸಿ. ಎಂ. ಇಬ್ರಾಹಿಂ.—ಕೇಂದ್ರ ಸರ್ಕಾರವನ್ನು ಟೀಕೆ ಮಾಡುವುದಕ್ಕೆ ಈ ಸದನವನ್ನು ಮಾನ್ಯ ಸದಸ್ಯರು ಉಪಯೋಗಿಸಿಕೊಳ್ಳುತ್ತಿದ್ದಾರೆ. ತಾವು ಅದಕ್ಕೆ ಅವಕಾಶ ಕೊಡಬಾರದು.

ಶ್ರೀ ಬಿ. ವಿ. ಕಕ್ಕಿಲಾಯ.—ಈ ವರದಿಯ ಬಗ್ಗೆ ಮಾತನಾಡಲು ನನಗೆ ಸಂಪೂರ್ಣವಾದ ಹಕ್ಕಿದೆ.

(ಆಡಳಿತ ಪಕ್ಷದ ಕಡೆಯಿಂದ ಮತ್ತು ವಿರೋಧಪಕ್ಷದ ಕಡೆಯಿಂದ ಅನೇಕ ಮಾನ್ಯ ಸದಸ್ಯರು ಎದ್ದುನಿಂತು 'ಮಾತನಾಡಲು ಪ್ರಾರಂಭ' ಮಾಡಿದರು)

SRI B. B. SAYANAK.—Sir, I rise to a Point of Order.

** ** ** ** ** **

MR. SPEAKER.—Nothing to be recorded.

(ಎಲ್ಲ ಮಾನ್ಯ ಸದಸ್ಯರು ಕುಳಿತುಕೊಳ್ಳುವಂತೆ ಅಧ್ಯಕ್ಷರು ವಿನಂತಿ ಮಾಡಿಕೊಂಡರು)

ಅಧ್ಯಕ್ಷರು.—ಮಾನ್ಯ ಸದಸ್ಯರು ಈ ಮನೆಯ ಗೌರವವನ್ನು ಕಾಪಾಡುವ ರೀತಿಯಲ್ಲಿ ವರ್ತನೆ ಮಾಡಿರುವುದನ್ನು ನೋಡಿ ನನಗೆ ವ್ಯಸನವಾಗಿದೆ. ಒಬ್ಬರಿಗಿಂತ ಹೆಚ್ಚು ಸದಸ್ಯರು ಮಾತನಾಡಬಾರದೆಂದು ನಾನು ಅನೇಕ ಸಲ ಹೇಳಿದರೂ ಸಹ, ಅದನ್ನು ಅರ್ಥ ಮಾಡಿಕೊಳ್ಳದೆ ಈ ರೀತಿ ಎಲ್ಲರೂ ಎದ್ದು ಮಾತನಾಡುತ್ತಿದ್ದೀರಿ. ಈ ಮನೆಯ ಗೌರವವೇನು, ಈ ಮನೆಯ ಸದಸ್ಯರ ಗೌರವವೇನು ಎಂಬುದನ್ನು ತಾವು ಸ್ವಲ್ಪ ಅರ್ಥಮಾಡಿಕೊಳ್ಳಬೇಕು. ಜಗಳ ಮಾಡುವ ರೀತಿಯಲ್ಲಿ ಮಾತನಾಡುವುದು ಸರಿಯಲ್ಲ. ಗಾಳಿಯೊಡನೆ ಗುದ್ದಾಡುವುದು ಸರಿಯೇ ಎಂದು ನಾನು ತಮ್ಮನ್ನು ಕೇಳುತ್ತೇನೆ ? ಈ ಮನೆಯ ಎರಡೂ ಕಡೆಗಳಲ್ಲಿರತಕ್ಕಂಥ ನಾಯಕರು ಮತ್ತು ವಿಪ್‌ಗಳು ಸದಸ್ಯರುಗಳನ್ನು ತಮ್ಮ ಹತೋಟಿಗೆ ತೆಗೆದುಕೊಳ್ಳಬೇಕು. ಮತ್ತು ಸದಸ್ಯರಿಗೆ ಸರಿಯಾದಂಥ ವಿವೇಕವನ್ನು ಹೇಳುವುದು ಉತ್ತಮವೆಂದು ನಾನು ಎರಡೂ ಕಡೆಯವರಿಗೆ ಹೇಳುತ್ತಿದ್ದೇನೆ. ಒಟ್ಟಿನಲ್ಲಿ ಈ ಮನೆಯ ಘನತೆ ಮತ್ತು ಗೌರವಗಳನ್ನು ಕಾಪಾಡಿಕೊಂಡು ಹೋಗಬೇಕೆಂದು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಜೆ. ಎಚ್. ಪಟೇಲ್.—ತಮ್ಮ ಆದೇಶವನ್ನು ನಾವು ಪಾಲಿಸುತ್ತೇವೆ.....

ಶ್ರೀ ಎಸ್. ಎಂ. ಶೀರ್ನಾಳಿ ಚಂದ್ರಶೇಖರ್.—ಸ್ವಾಮಿ, ನಾನು ಮೊದಲು ಎದ್ದು ನಿಂತಿದ್ದೆ. ಆದಕಾರಣ ನನಗೆ ಮಾತನಾಡಲು ತಾವು ಮೊದಲು ಅವಕಾಶ ಮಾಡಿಕೊಡಬೇಕು.

ಅಧ್ಯಕ್ಷರು.—ಆಗಬಹುದು.

SRI B. B. SAYANAK.—Sir, I raised a Point of Order, but I was not allowed. You permitted Sri Chandrasekhar to speak.

MR. SPEAKER.—How can I allow any member when the House was in disorder. ? I am sorry members from both sides were misbehaving in the House.

SRI S. M. SHEERNALY CHANDRASEKHAR.—The Chair knows who should be given preference; members cannot insist the Chair.

ಸ್ವಾಮಿ, ಮಾನ್ಯ ಕಕ್ಕಿಲಾಯ ಅವರು ಭೂತಲಿಂಗಮ್ ವರದಿಯ ಬಗ್ಗೆ ವಿಶ್ಲೇಷಣೆ ಮಾಡಿದರು. ಅದನ್ನು ಮಾನ್ಯ ಇಬ್ರಾಹಿಂ ಅವರು ಅರ್ಥ ಮಾಡಿಕೊಳ್ಳದೆ ಕೇಂದ್ರ ಸರ್ಕಾರವನ್ನು ಕ್ರಿಟಿಸೈಜ್ ಮಾಡುವುದು ಸರಿಯಲ್ಲವೆಂದು ಹೇಳುತ್ತಿದ್ದಾರೆ. ಜೊತೆಗೆ ಇಬ್ರಾಹಿಂ ಸಾಹೇಬರು ಅವರನ್ನು ಹೊಡೆಯುವ ರೀತಿಯಲ್ಲಿ ಮಾತನಾಡುತ್ತಿದ್ದರು. ಕೇಂದ್ರ ಸರ್ಕಾರದ ಬಗ್ಗೆ ಏನನ್ನೂ ಹೇಳುವುದಕ್ಕೆ ಮಾನ್ಯ ಸದಸ್ಯರಿಗೆ ಹಕ್ಕಿಲ್ಲ ಎನ್ನುವ ರೀತಿಯಲ್ಲಿ ಹೇಳಿದ್ದಾರೆ. ಒಂದು ವೇಳೆ ಅವರ ಅಭಿಪ್ರಾಯದಂತೆ ಆ ರೀತಿ ಹೇಳುವುದು ತಪ್ಪು ಎನ್ನುವುದಾದರೆ, ನೇರವಾಗಿ ಹೇಳಬಹುದು. ಆದರೆ ಅವರು ಮೈಮೇಲೆ ಬೀಳುವ ರೀತಿಯಲ್ಲಿ ಮಾತನಾಡಿದರೆ ನಾವು ಇಲ್ಲಿ ಕೆಲಸ ಮಾಡುವುದೇ ಕಷ್ಟವಾಗುತ್ತದೆ

ಅಧ್ಯಕ್ಷರು.—ಅದನ್ನು ನಾನು ಅವರಿಗೆ ಕೇಳುತ್ತಿದ್ದೆ. ಅಷ್ಟರಲ್ಲಿಯೇ ಅನೇಕ ಮಾನ್ಯ ಸದಸ್ಯರು ಏಕಕಾಲದಲ್ಲಿ ಎದ್ದುನಿಂತು ಮಾತನಾಡಿದ್ದು ಸರಿಯೇ ?

ಶ್ರೀ ಎಸ್. ಎಂ. ಶೀರ್ನಾಳಿ ಚಂದ್ರಶೇಖರ್.—ಇಲ್ಲಿ ಕೇಂದ್ರಸರ್ಕಾರದ ಪಾಲಿಸಿಯ ಬಗ್ಗೆ ಟೀಕೆ ಮಾಡುವುದಕ್ಕೆ ಮಾನ್ಯ ಸದಸ್ಯರಿಗೆ ಹಕ್ಕಿದೆಯೇ ಅಥವಾ ಇಲ್ಲವೇ ಎಂಬ ಪ್ರಶ್ನೆ ಬಂದಿದೆ. ಈ ಬಗ್ಗೆ ತಾವು ರೂಲಿಂಗ್ ಕೊಡಬೇಕು?

**** Matter not recorded as ordered by the Chair

MR. SPEAKER.—There is no Point of Order. The hon. member may please resume his seat.

ಶ್ರೀ ಎಸ್. ಎಂ. ಶೀರ್ನಳಿಚುದ್ರಶೇಖರ್. —ಈ ವಿಚಾರದಲ್ಲಿ ತಾವು ತಮ್ಮ ರೂಲಿಂಗ್‌ನು ಕೊಡಬೇಕೆಂದು ನಾನು ಕೇಳುತ್ತಿದ್ದೇನೆ.

MR SPEAKER.—I want the House to be in order. Hon. member cannot go on speaking when I have already given the Ruling. I am sorry, I may have to name him if he behaves like this. Hon. members C. M. Ibrahim and Gudu Sab also spoke though they were not called. Such things should not be repeated.

ಶ್ರೀ ಬಿ. ಭಾಸ್ಕರಶೆಟ್ಟಿ.—ನಾನೂ ಎರಡೂ ಕಡೆಯ ಸದಸ್ಯರಲ್ಲಿ ಒಂದು ಅರಿಕೆ ಮಾಡಿಕೊಳ್ಳುತ್ತೇನೆ.

ಅಧ್ಯಕ್ಷರು.—ಈ ರೀತಿಯಿಂದ ಮಾನ್ಯ ಸದಸ್ಯರು ವರ್ತನೆ ಮಾಡಿದರೆ ಪತ್ರಿಕೆಯವರು ಸಹ ಅದನ್ನೇ ವರದಿ ಮಾಡುತ್ತಾರೆ.

ಶ್ರೀ ಬಿ. ಭಾಸ್ಕರಶೆಟ್ಟಿ.—ಸ್ವಾಮಿ, ಮಾನ್ಯ ಸದಸ್ಯರು ಇಲ್ಲಿ ಮಾತನಾಡುವಾಗ, ಪ್ರತಿಯೊಬ್ಬ ಸದಸ್ಯರಿಗೂ ಅವರ ಹಕ್ಕು ಬಾಧ್ಯತೆಗೆ ಅನುಗುಣವಾಗಿ. ಆದರ ಒಂದು ಚೌಕಟ್ಟಿನೊಳಗೆ ಮಾತನಾಡುವುದಕ್ಕೆ ಇಲ್ಲಿ ಅವಕಾಶವಿರುವಾಗ, ಅವರನ್ನು ಉದ್ರೇಕಗೊಳಿಸುವಂತಹ ಮಾತುಗಳನ್ನು ಬೇರೆ ಸದಸ್ಯರು ಆಡಬಾರದೆಂದು ಎಲ್ಲರಲ್ಲಿಯೂ ಕೇಳಿಕೊಳ್ಳುತ್ತೇನೆ. ಮಾನ್ಯ ಕಕ್ಕಿಲಾಯ ಅವರು ಭೂತಲಿಂಗಮ್ ವರದಿಯ ಮೇಲೆ ಮಾತನಾಡಿದರು. ಮತ್ತು ಆ ವರದಿ ಸರಿಯಿಲ್ಲವೆಂದು ಹೇಳಿದರು. ಅವರ ಪಕ್ಷದವರು ಬೇಕಾದರೆ ಆ ವರದಿ ಸರಿ ಇದೆ ಎಂದು ಮಾತನಾಡಲಿ. ಆ ರೀತಿ ಮಾಡದೆ ಏಕಕಾಲದಲ್ಲಿ ಅನೇಕ ಮಾನ್ಯ ಸದಸ್ಯರು ಎದ್ದುನಿಂತು ಮಾತನಾಡಿದರೆ ಈ ಕಡೆಯವರು ಸಹ ಎದ್ದುನಿಲ್ಲುತ್ತಾರೆ. ಆಗ ಈ ಸದನದ ಗೌರವ ಕಡಿಮೆಯಾಗುತ್ತದೆ. ಆದ್ದರಿಂದ ಯಾರೂ ಸಹ ಆ ರೀತಿ ಮಾಡಬಾರದೆಂದು ಹೇಳುತ್ತೇನೆ.

Bus Accident Near Sira (Contd)

SRI R. GUNDU RAO.—I would like to inform the House that the hon. Member has been brought to the Bangalore Mental Hospital and he is improving. He has been kept in special ward No. 12 and Dr. Reddy, specialist is treating him. The other six persons who are in Tumkur hospital are also progressing

MR. SPEARER.—Expert Doctors including a physician is attending on him. I will also see the Hon. Member.

Demands for grants—(Demand No. 21 and 58) Contd

SRI B. B. SAYANAK.—Sir, it is nearing seven o'clock and I would like to know whether the Chair has extended the time of the House ?

MR. SPEAKER.—The entire House is listening to the discussions in a calm atmosphere If the House wants that it should be adjourned certainly I will adjourn it.

SRI G. B. SHANKAR RAO.—I humbly submit that nothing could be taken for granted. Unless the entire House agrees we cannot sit be yond 6 o'clock.

MR. SPEAKER,—Since there was no objection from anybody I felt it has consented to sit longer. There are still a few members to speak. I would like to know from the House whether we shall conclude the discussion now.....

SRI C. M. ARVMUGHUM.—Sir, I submit that we way adjourn now and conclude the discussions on the Labour and Excise demands and the Hon. Minister may reply tomorrow.

ಅಧ್ಯಕ್ಷರು.—ಮಾನ್ಯ ಸದಸ್ಯರು ಇನ್ನು ಎಷ್ಟು ಡಿಮ್ಯಾಂಡ್ಸ್‌ಗಳು ಇವೆ ಎನ್ನುವುದನ್ನು ಅರ್ಥಮಾಡಿಕೊಳ್ಳಬೇಕು

2-00 ಪಿ. ಎಂ.

ಶ್ರೀ ಹೆಚ್. ಗಂಗಾಧರನ್,—ಅಧ್ಯಕ್ಷರೇ, ಈಗ ನಾವು ಮಾತನಾಡುವುದಾಗಲಿ. ಸಚಿವರು ಉತ್ತರ ಕೊಡುವುದಾಗಲಿ ಒಂದೇ ಆಗುತ್ತದೆ. ಈಗ ಇದೇ ತಿಂಗಳು 21ನೇ ತಾರೀಖಿನೊಳಗೆ ಎಲ್ಲಾ ಡಿಮ್ಯಾಂಡ್ಸ್‌ಗಳು ಮುಗಿಯಬೇಕಾಗಿದೆ. ಆದ್ದರಿಂದ ಯಾರು ಭಾಷಣ ಮಾಡುವುದು ಬೇಡ. ಮಂತ್ರಿಗಳು ಉತ್ತರ ಕೊಡುವುದು ಬೇಡ ಈಗ ಡಿಮ್ಯಾಂಡ್ಸ್ ಮತ್ತು ಆಪ್ರೋಪ್ರಿಯೇಷನ್ ಬಿಲ್ ಏನು ಇದೆ ಅದನ್ನು ಪಾಸ್ ಮಾಡೋಣ. ಮುಂದೆ ಸೆಪ್ಟೆಂಬರ್, ಅಕ್ಟೋಬರ್ ತಿಂಗಳಿನಲ್ಲಿ ಅಧಿವೇಶನ ಕರೆದಾಗ ನಾವು ಚರ್ಚೆ ಮಾಡುವುದಕ್ಕೆ ಅವಕಾಶ ಕೊಡಿ. ಏಕೆಂದರೆ ನಮ್ಮನ್ನು ಜನರು ಆಯ್ಕೆ ಮಾಡಿ ಕಳುಹಿಸಿರುವುದು ನಮ್ಮ ಅಭಿಪ್ರಾಯವನ್ನು ಕೊಡುವುದಕ್ಕೆ.

ಅಧ್ಯಕ್ಷರು.—ಮಾನ್ಯ ಸದಸ್ಯರಿಗೆ ಟೈಮ್ ಅಡ್ಜಸ್ಟ್ ಮಾಡಿಕೊಳ್ಳಬೇಕು ಎಂದು ನಾನು ಮೊದಲಿನಿಂದಲೂ ಹೇಳಿಕೊಂಡು ಬಂದೆ. ಒಬ್ಬೊಬ್ಬ ಸದಸ್ಯರು ಒಂದೊಂದು ಗಂಟೆಗಳ ಕಾಲ ಮಾತನಾಡಿ ಈಗ ಕಾಲ ಇಲ್ಲ ಎಂದರೆ ಏನು ಮಾಡುವುದಕ್ಕಾಗುತ್ತದೆ.

ಶ್ರೀ ಹೆಚ್. ಗಂಗಾಧರನ್.—ಅಧ್ಯಕ್ಷರೆ, ನಾಳೆ ಮಾತನಾಡುವವರ ಪಟ್ಟಿಯನ್ನು ಇವೊತ್ತೇ ತೆಗೆದುಕೊಂಡು ಒಬ್ಬೊಬ್ಬ ಸದಸ್ಯರಿಗೆ ಇಷ್ಟು ವೇಳೆ ಎಂದು ನಿಗಧಿ ಮಾಡಿದರೆ ಒಳ್ಳೆಯದು. ಈಗ ಹಳೆಯ ಸದಸ್ಯರು ತಮ್ಮ ಓಲ್ಡ್ ಕನ್‌ವೆನಷನ್ ಫಾಲೋ ಮಾಡುತ್ತಾರೆ. ಅವರಿಗೆ ಸಪ್ಲಿಮೆಂಟರಿ ಕೇಳಿ ಎಂದರೆ ಭಾಷಣ ಪ್ರಾರಂಭ ಮಾಡುತ್ತಾರೆ, ಆದ್ದರಿಂದ ಒಬ್ಬೊಬ್ಬ ಸದಸ್ಯರಿಗೆ ಇಷ್ಟು ವೇಳೆ ಎಂದು ನಿಗಧಿ ಮಾಡಿ ಸದನದ ಕಾರ್ಯಕಲಾಪ ಮುಗಿಸಬೇಕು ಎಂದು ತಿಳಿಸುತ್ತೇನೆ.

ಶ್ರೀ ಜಿ. ಬಿ. ಶಂಕರ್‌ರಾವ್. — ಮಾನ್ಯ ಸದಸ್ಯರು ಹಳೆ ಸದಸ್ಯರಿಗೆ ರೆಫರ್ ಮಾಡಿ ಹೇಳುತ್ತಿದ್ದಾರೆ. ನಾನು ಯಾವಾಗಲೂ ಯಾರ ಬಗ್ಗೆಯೂ ಕಾಮೆಂಟ್ ಮಾಡುವುದಿಲ್ಲ. ನಮ್ಮ ಮಾನ್ಯ ಕಿರಿಯ ಸದಸ್ಯರು ಬಹಳ ಕಾಲ ಭಾಷಣ ಮಾಡುತ್ತಾರೆ ಎಂದು ಹೇಳಿದರು. ನನಗೆ ಪ್ರಶ್ನೋತ್ತರ ವೇಳೆಯಲ್ಲಿ, ಗಮನ ಸೆಳೆಯತಕ್ಕ ಸೂಚನೆಯಲ್ಲಿ ಎಷ್ಟು ಕಾಲ ಮಾತನಾಡಬೇಕು ಎಂದು ನನಗೆ ಗೊತ್ತಿದೆ. ಆದರ ಬಗ್ಗೆ ನಾನು ರಿಸ್ಟೈಂಟ್ ಆಗಿ ಮಾತನಾಡಿದ್ದೇನೆ. ನಮ್ಮ ಸದಸ್ಯರು ಸಪ್ಲಿಮೆಂಟರಿಗೆ ಭಾಷಣ ಮಾಡುತ್ತಾರೆ ಎಂದು ಹೇಳಿದರು. ನಾನು ಮಾತ್ರ ಹಾಗೆ ಮಾಡಿಲ್ಲ. ಇವೊತ್ತು ನಾನು ನಿಯಮದ ಪ್ರಕಾರ ನಾವು ಆಸೆಂಬ್ಲಿ ಕಂಡಕ್ಟ್ ಮಾಡಿದರೆ ಸಾಕಷ್ಟು ಕಾಲಾವಕಾಶ ಸಿಕ್ಕುತ್ತದೆ. ಇದು

ಬಡ್ಜೆಟ್ ಅಧಿವೇಶನವಾದ್ದರಿಂದ ಬೇಡಿಕೆಗಳ ಮೇಲೆ ಸಾಕಷ್ಟು ಚರ್ಚೆಯಾಗಬೇಕಾಗಿದೆ. ಇವೊತ್ತು ಇಲ್ಲ. ನಡೆಯುತಕ್ಕದ್ದನ್ನು ನೋಡಿದರೆ ಅರ್ಧ ಗಂಟೆ, ಮುಂಕ್ಕಾಲು ಗಂಟೆ ಗಲಾಟೆಗೆ ಸಮಯ ಹೋಗುತ್ತದೆ ಇವೊತ್ತು ಗಮನ ಸೆಳೆಯತಕ್ಕಂತಹ ಸೂಚನೆಗೆ ಇಷ್ಟೇ ಅವಧಿಯಲ್ಲಿ ಮುಗಿಯಬೇಕು ಎಂದು ಒಂದು ವೇಳೆ ನಿಗಧಿ ಮಾಡಬೇಕು, ಈ ರೀತಿ ಕ್ವೆಶ್ಚನ್ ಅವರ್, ಕಾಲಿಂಗ್ ಅಟೆನ್‌ಷನ್ ಮೇಲೆ ಕಾಲ ಸ್ವಲ್ಪ ಕಡಿಮೆ ಮಾಡಿಕೊಂಡರೆ, ಈ ಡಿಮ್ಯಾಂಡ್ ಮೇಲೆ ಮಾತನಾಡುವುದಕ್ಕೆ ಸಾಕಷ್ಟು ಸಮಯ ಸಿಕ್ಕುತ್ತದೆ. ಇದನ್ನೆಲ್ಲಾ ಮಾಡದೇ ನಮಗೆ ಮಾತನಾಡುವುದಕ್ಕೆ ಸಮಯ ಸಿಕ್ಕಲಿಲ್ಲ ಎಂದರೆ ಹೇಗೆ ? ಇವೊತ್ತು ತಾವು ಪ್ರಶ್ನೋತ್ತರ ವೇಳೆ, ಗಮನ ಸೆಳೆಯುವ ಸೂಚನೆ ರೂಲ್ ೩೨೨ರ ಕೆಳಗೆ ಬರತಕ್ಕದ್ದಕ್ಕೆ ಸಮಯ ನಿಗದಿ ಮಾಡಿಕೊಂಡು ಆದಕ್ಕೆ ರಿಸ್ಟ್ರಿಕ್ಟ್ ಆದರೆ ಅಸೆಂಬ್ಲಿ ಬಹಳ ಚೆನ್ನಾಗಿ ನಡೆಯುತ್ತದೆ. ಇಲ್ಲದೇ ಹೋದರೆ ಹೊರಗಡೆ ಇರತಕ್ಕ ಜನರು ಅಸೆಂಬ್ಲಿ ಚೆನ್ನಾಗಿ ನಡೆಯುವುದಿಲ್ಲ ಎಂದು ಹೇಳುತ್ತಾರೆ.

ಶ್ರೀ ಹೆಚ್. ಟಿ. ಕೃಷ್ಣಪ್ಪ.—ಎಲ್ಲಾ ಸದಸ್ಯರೂ ಯಾವೊತ್ತು ಎಲ್ಲಾ ಡಿಮ್ಯಾಂಡ್‌ಗಳ ಮೇಲೆ ಮಾತನಾಡುವುದಕ್ಕೆ ಸಾಧ್ಯವಿಲ್ಲ. ಒಂದೊಂದು ಡಿಮಾಂಡ್ಸ್ ಮೇಲೆ ಎಷ್ಟು ಜನರು ಮಾತನಾಡಲಿಕ್ಕೆ ಸಾಧ್ಯ ಅಷ್ಟಕ್ಕೆ ರಿಸ್ಟ್ರಿಕ್ಟ್ ಆಗಬೇಕು. ಈ ರೀತಿ ಆದರೆ ನಾವು ಸಮಯವನ್ನು ಸರಿಯಾದ ರೀತಿಯಲ್ಲಿ ಉಪಯೋಗಿಸಿಕೊಳ್ಳುವುದಕ್ಕೆ ಅನುಕೂಲವಾಗುತ್ತದೆ.

ಅಧ್ಯಕ್ಷರು.—ಮಾನ್ಯ ಸದಸ್ಯರು ಬೇರೆ ಡಿಮ್ಯಾಂಡ್‌ಗಳ ಮೇಲೆ ಮಾತನಾಡುವುದಕ್ಕೆ ತೊಂದರೆ ಯಾಗುತ್ತದೆ ಎನ್ನುವುದನ್ನು ನಾನು ಹೇಳಿಕೊಂಡೇ ಬಂದಿದ್ದೇನೆ. ಈ ರೀತಿ ಧೀರ್ಘವಾಗಿ ಭಾಷಣ ಮಾಡಿದರೆ ಉಳಿದ ಡಿಮ್ಯಾಂಡ್‌ಗಳ ಮೇಲೆ ಮಾತನಾಡುವುದಕ್ಕೆ ನಮಗೆ ಅವಕಾಶ ಸಿಕ್ಕುವುದಿಲ್ಲ ಎನ್ನುವುದನ್ನು ಮಾನ್ಯ ಸದಸ್ಯರು ತಿಳಿದುಕೊಳ್ಳಬೇಕು.

SRI A. LAKSHMI SAGAR.—We may conclude the debate on Demands today and the Hon. Minister may be directed to give his neply tomorrow. We may kindly adjourn now.

MR. SPEAKER.—Discussion is over and the House will adjourn and meet tomorrow at 9-00 A. M.

The House adjourned at Seven minutes past Seven of the Clock to meet again at Nine of the Clock on Wednesday the 26th July 1978